Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 27-11-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 27-11-2020 |
| --- | --- |
| Page No | 2 |


# ಬೇಗೂರು: ಸಂಚಾರ ಮಾರ್ಗ ಮಾರ್ಪಾಡು

ಬೆಂಗಳೂರು: ಬಿಬಿಎಂಪಿಯು ಥಣಿಸಂದ್ರ ಮುಖ್ಯರಸ್ತೆಯ ರೈಲ್ವೆ ಕೆಳಸೇತುವೆಯಿಂದ ಬೇಗೂರು ಜಂಕ್ಷನ್‌ವರೆಗೆ ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಿದೆ. ಈ ಸಲುವಾಗಿ ಈ ಪ್ರದೇಶದ ಸಂಚಾರ ಮಾರ್ಗದಲ್ಲಿ ಮಾರ್ಪಾಡು ಮಾಡಲಾಗಿದೆ.

ಸಾರ್ವಜನಿಕರಿಗೆ ಸಮಸ್ಯೆ ಆಗಬಾರದು ಎಂಬ ಕಾರಣಕ್ಕೆ ಈ ರಸ್ತೆಯ ಒಂದು ಪಾರ್ಶ್ವದಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಈ ವ್ಯವಸ್ಥೆ ಇದೇ 27ರಿಂದ 2021ರ ಜ.10 ರವರೆಗೆ ಮುಂದುವರಿಯಲಿದೆ ಎಂದು ಬಿಬಿಎಂಪಿ ತಿಳಿಸಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 27-11-2020 |
| --- | --- |
| Page No | 3 |


## ಕೋವಿಡ್: ರಾಜ್ಯದಲ್ಲಿ 8.42 ಲಕ್ಷ ಮಂದಿ ಗುಣಮುಖ

# ಸೋಂಕಿತರ ಸಂಖ್ಯೆ 8.79 ಲಕ್ಷಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ 1,505 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಸೋಂಕಿಗೀಡಾದವರ ಒಟ್ಟು ಸಂಖ್ಯೆ 8.79 ಲಕ್ಷಕ್ಕೆ ಏರಿಕೆಯಾಗಿದೆ.

ಈ ತಿಂಗಳು 26 ದಿನಗಳಲ್ಲಿ 56,148 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 2,159 ಮಂದಿ ಸೋಂಕಿತರಾಗಿದ್ದಾರೆ. ಕೋವಿಡ್ ಪೀಡಿತರಲ್ಲಿ ಮತ್ತೆ 12 ಮಂದಿ ಮೃತಪಟ್ಟಿದ್ದು, ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 11,726ಕ್ಕೆ ಏರಿಕೆಯಾಗಿದೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 367 ಮಂದಿ ಸೇರಿದಂತೆ ರಾಜ್ಯದಲ್ಲಿ 1,067 ಮಂದಿಗೆ ಕಾಯಿಲೆ ವಾಸಿಯಾಗಿದೆ. ಇದರಿಂದಾಗಿ ಗುಣಮುಖರ ಸಂಖ್ಯೆ 8.42 ಲಕ್ಷಕ್ಕೆ ತಲುಪಿದೆ.

ಸದ್ಯ 25,316 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಇದರಲ್ಲಿ 409 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ. ಒಂದೇ ದಿನ 1.20 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈವರೆಗೆ 1.06 ಕೋಟಿ ಮಂದಿ ಕೋವಿಡ್ ಪರೀಕ್ಷೆಯನ್ನು ಮಾಡಿಸಿಕೊಂಡಿದ್ದಾರೆ. 14 ದಿನಗಳ ಅವಧಿಯಲ್ಲಿ 1.29 ಲಕ್ಷ ನೇರ ಸಂಪರ್ಕಿತರು ಹಾಗೂ 1.44 ಲಕ್ಷ ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಲಾಗಿದೆ. ಕಳೆದ 7 ದಿನಗಳ ಅವಧಿಯಲ್ಲಿ 33,481 ಮಂದಿಯನ್ನು ಮನೆ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

ಬೆಂಗಳೂರಿನಲ್ಲಿ 844 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.67 ಲಕ್ಷ ದಾಟಿದೆ. ಮೈಸೂರಿನಲ್ಲಿ ಹೊಸದಾಗಿ 101 ಪ್ರಕರಣಗಳು ಪತ್ತೆಯಾಗಿವೆ. ಅಲ್ಲಿ ಒಟ್ಟು ಸೋಂಕಿತರ ಸಂಖ್ಯೆ 50,448ಕ್ಕೆ ತಲುಪಿದೆ. ದಕ್ಷಿಣ ಕನ್ನಡ (57), ಹಾಸನ (51) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.

### ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ




## ಐವರಿಗೆ ಫೆಲೋಶಿಪ್

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು 2019–2020ನೇ ಸಾಲಿನ ಫೆಲೋಶಿಪ್‌ಗೆ ಐವರು ಕಲಾವಿದರನ್ನು ಆಯ್ಕೆ ಮಾಡಿದೆ.

ಬೆಂಗಳೂರಿನ ಡಿಂಪಲ್ ಬಿ. ಶಹ, ಮಂಜುನಾಥ ವಿ. ಕಲ್ಲೇದೇವರು, ಮೈಸೂರಿನ ಸುರೇಶ ಕೆ., ವಿಜಯಪುರದ ನಿಂಗನಗೌಡ ಸಿ. ಪಾಟೀಲ ಕಲಬುರ್ಗಿಯ ಜಗನ್ನಾಥ ಬೆಲ್ಲದ, ಫೆಲೋಶಿಪ್‌ಗೆ ಆಯ್ಕೆಯಾಗಿದ್ದಾರೆ ಎಂದು ಅಕಾಡೆಮಿಯ ಅಧ್ಯಕ್ಷ ಮಹೇಂದ್ರ ಡಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 27-11-2020 |
|---|---|
| Page No | 3 |


# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೇಂದ್ರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು–560002.

## ಸಾರ್ವಜನಿಕ ಪ್ರಕಟಣೆ

## ಸಹಾಯ 2.0 ತಂತ್ರಾಂಶದ ಕಾರ್ಯವಿಧಾನ ಮಾಹಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಾಗರಿಕರು ತಮ್ಮ ಕುಂದು ಕೊರತೆಗಳನ್ನು ದಾಖಲಿಸಲು "ಸಹಾಯ 2.0" ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ತಂತ್ರಾಂಶವು "ನಮ್ಮ ಬೆಂಗಳೂರು" ಆ್ಯಪ್‌ನಲ್ಲಿ ಲಭ್ಯವಿರುತ್ತದೆ. ಈ ತಂತ್ರಾಂಶವು ಈ ಕೆಳಕಂಡ ವೈಶಿಷ್ಟ್ಯತೆಗಳನ್ನು ಹೊಂದಿರುತ್ತದೆ.

**ಸಹಾಯ 2.0 ತಂತ್ರಾಂಶವನ್ನು "ಹೊಸ ವೈಶಿಷ್ಟ್ಯತೆಗಳು" ಹಾಗೂ "ಹೆಚ್ಚು ಬಳಕೆದಾರ ಸ್ನೇಹಿ"ಯನ್ನಾಗಿ ಅಭಿವೃದ್ಧಿಪಡಿಸಲಾಗಿದೆ.**

1. ನಾಗರಿಕರು ತಮ್ಮ ಕುಂದುಕೊರತೆಗಳನ್ನು 'ನಮ್ಮ ಬೆಂಗಳೂರು ಮೊಬೈಲ್ ಅಪ್ಲಿಕೇಷನ್', 'ಬಿಬಿಎಂಪಿ ವೆಬ್ ಪೋರ್ಟಲ್', 'ಬಿಬಿಎಂಪಿ 24/7 ಕಾಲ್ ಸೆಂಟರ್: 080–22660000', 'ವಾಟ್ಸಾಪ್ ಸಂಖ್ಯೆ: +91 9480685700' ಹಾಗೂ ಸಾಮಾಜಿಕ ಮಾಧ್ಯಮಗಳಾದ 'ಫೇಸ್‌ಬುಕ್', 'ಟ್ವಿಟರ್'ಗಳ ಮೂಲಕ ಸಲ್ಲಿಸಬಹುದಾಗಿದ್ದು, ಸದರಿ ದೂರುಗಳು ಅಂತಿಮವಾಗಿ ಸಹಾಯ 2.0 ತಂತ್ರಾಂಶದಲ್ಲಿ ದಾಖಲಾಗುತ್ತವೆ.
2. ನಾಗರಿಕರು ಸಹಾಯ 2.0 ದಲ್ಲಿ ದೂರುಗಳನ್ನು ದಾಖಲಿಸಿದ ಕೂಡಲೇ ದೂರುದಾರರಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಎಸ್.ಎಂ.ಎಸ್. ಮೂಲಕ ಮಾಹಿತಿ ವಿನಿಮಯವಾಗುತ್ತದೆ. ಅಲ್ಲದೇ ದೂರುದಾರರು ತಮ್ಮ ದೂರಿನ ಸ್ಥಿತಿಗತಿಗಳನ್ನು 'ನಮ್ಮ ಬೆಂಗಳೂರು' ಅಪ್ಲಿಕೇಷನ್ ಮೂಲಕ ತಿಳಿದುಕೊಳ್ಳಬಹುದಾಗಿರುತ್ತದೆ.
3. ದೂರು ದಾಖಲಿಸಿದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರಿನ ಸಂಕ್ಷಿಪ್ತ ಮಾಹಿತಿಯ ನೋಟಿಫಿಕೇಷನ್ ರವಾನೆಯಾಗುತ್ತದೆ ಹಾಗೂ ಗೂಗಲ್ ಮ್ಯಾಪ್ ಸಮೇತ ಸಂಪೂರ್ಣ ವಿವರಗಳು ಮತ್ತು ಸ್ಥಳದ ಮಾಹಿತಿ ತಂತ್ರಾಂಶದಲ್ಲಿ ಲಭ್ಯವಾಗುತ್ತದೆ.
4. ಪಾಲಿಕೆ ಅಧಿಕಾರಿಗಳಿಗೆ ಪ್ರತಿ ದೂರನ್ನೂ ಪರಿಹರಿಸಲು ಸಮಯದ ಮಿತಿಯನ್ನು ನಿಗದಿಪಡಿಸಲಾಗಿದ್ದು, ಒಂದು ವೇಳೆ ನಿಗದಿತ ಸಮಯದಲ್ಲಿ ದೂರುಗಳನ್ನು ಪರಿಹರಿಸದಿದ್ದಲ್ಲಿ, ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನೆಯಾಗುತ್ತದೆ ಹಾಗೂ ಸದರಿ ಮಾಹಿತಿಯು ಎಸ್.ಎಂ.ಎಸ್. ಮೂಲಕ ದೂರುದಾರರಿಗೂ ಸಹ ರವಾನೆಯಾಗುತ್ತದೆ.
5. ಅನುಮೋದನೆ / ಅನುದಾನ / ಕಾಲಾವಕಾಶದ ಅವಶ್ಯಕತೆ ಇರುವ ದೂರುಗಳನ್ನು "ದೀರ್ಘಾವಧಿ ದೂರುಗಳು" ಪಟ್ಟಿಗೆ ಸೇರಿಸಲು ವ್ಯವಸ್ಥೆ ಕಲ್ಪಿಸಲಾಗಿದ್ದು, ಈ ಸಂಬಂಧ ದೂರುದಾರರಿಗೆ ಎಸ್‌ಎಂಎಸ್ ಮೂಲಕ ಮಾಹಿತಿ ರವಾನೆಯಾಗುತ್ತದೆ.
6. ಪಾಲಿಕೆ ಅಧಿಕಾರಿಗಳು ದೂರನ್ನು ಪರಿಹರಿಸಿದ ಕೂಡಲೇ ದೂರುದಾರರಿಗೆ ಎಸ್‌ಎಂಎಸ್ ಮೂಲಕ ಮಾಹಿತಿಯು ರವಾನೆಯಾಗುತ್ತದೆ ಮತ್ತು ಕೈಗೊಂಡಿರುವ ಕ್ರಮದ ಬಗ್ಗೆ ದೂರುದಾರರು ತಮ್ಮ ಅಭಿಪ್ರಾಯಗಳನ್ನು ದಾಖಲಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.
7. ಅಧಿಕಾರಿಗಳು ಹಾಗೂ ದೂರುದಾರರು ದೂರಿಗೆ ಸಂಬಂಧಪಟ್ಟ ಪರಿಹಾರಕ್ಕೆ ಮೊದಲು ಮತ್ತು ನಂತರದ ಛಾಯಾಚಿತ್ರವನ್ನು ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.
8. ನಾಗರಿಕರು ಪಾಲಿಕೆಗೆ ಸಂಬಂಧಿಸಿದ 'ರಸ್ತೆಗುಂಡಿಗಳು', 'ಪಾದಚಾರಿ ಮಾರ್ಗಗಳು', 'ಬೀದಿ ದೀಪಗಳು', 'ಕಸ ವಿಲೇವಾರಿ' ಮುಂತಾದ ಯಾವುದೇ ದೂರುಗಳನ್ನು ಸಹಾಯ 2.0 ತಂತ್ರಾಂಶದಲ್ಲಿ ದಾಖಲಿಸಬಹುದಾಗಿರುತ್ತದೆ.
9. ನಾಗರಿಕರು 'ನಮ್ಮ ಬೆಂಗಳೂರು' ತಂತ್ರಾಂಶವನ್ನು Play store: nammabengaluru ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.




ಸಹಿ/– ಆಯುಕ್ತರು, ಬಿ.ಬಿ.ಎಂ.ಪಿ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 27-11-2020 |
|---|---|
| Page No | 3B |



ಜಾಲಹಳ್ಳಿ ವೃತ್ತದಲ್ಲಿ ಗುರುವಾರ ತುಂತುರು ಮಳೆ ಸುರಿಯಿತು — ಪ್ರಜಾವಾಣಿ ಚಿತ್ರ

## ನಗರದಲ್ಲಿ 'ನಿವಾರ್' ಚಂಡಮಾರುತ ಪ್ರಭಾವ

# ದಿನವಿಡೀ ಜಿಟಿಜಿಟಿ ಮಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಿವಾರ್' ಚಂಡ ಮಾರುತದ ಪರಿಣಾಮದಿಂದ ನಗರದಾದ್ಯಂತ ಗುರುವಾರ ದಿನವಿಡೀ ಜಿಟಿಜಿಟಿ ಮಳೆ ಸುರಿಯಿತು.

ಬಂಗಾಳಕೊಲ್ಲಿಯಲ್ಲಿ ಸೃಷ್ಟಿಯಾಗಿದ್ದ 'ನಿವಾರ್' ಚಂಡಮಾರುತದಿಂದಾಗಿ ನಗರದಲ್ಲಿ ಮಳೆಯಾಯಿತು. ಧಾರಾಕಾರ ಮಳೆ ಸಂಭವಿಸದೆ, ದಟ್ಟವಾದ ಮೋಡ ಕವಿದ ವಾತಾವರಣದೊಂದಿಗೆ ತುಂತುರು ಮಳೆ ನಿರಂತರವಾಗಿ ಸುರಿಯಿತು. ಮಳೆಯ ನಡುವೆಯೂ ಚಳಿ ತೀವ್ರವಾಗಿತ್ತು. 'ನಿವಾರ್'ನಿಂದ ನಗರದಲ್ಲಿ ಸರಾಸರಿ 3 ಸೆಂ.ಮೀಗಿಂತ ಕಡಿಮೆ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಕೆಂಗೇರಿ, ಮೈಸೂರು ರಸ್ತೆ, ವಿಜಯನಗರ, ರಾಜಾಜಿನಗರ, ಮೆಜೆಸ್ಟಿಕ್, ಕೆ.ಆರ್.ಮಾರುಕಟ್ಟೆ, ಶಾಂತಿನಗರ, ಜಯನಗರ, ಚಾಮರಾಜಪೇಟೆ, ಹೆಬ್ಬಾಳ, ಯಲಹಂಕ, ಬನಶಂಕರಿ, ರಾಜರಾಜೇಶ್ವರಿ ನಗರ ಸೇರಿದಂತೆ ಬಹುತೇಕ ಎಲ್ಲ ಬಡಾವಣೆಗಳಲ್ಲಿ ತುಂತುರು ಮಳೆ ಮಧ್ಯಾಹ್ನದವರೆಗೆ ಸುರಿಯಿತು. ಸಂಜೆ ವೇಳೆಗೆ ಬಿರುಸುಗೊಂಡ ಮಳೆ ರಾತ್ರಿವರೆಗೆ ನಿರಂತರವಾಗಿ ಸುರಿಯಿತು.

**'ಯೆಲ್ಲೊ ಅಲರ್ಟ್' ಮುಂದುವರಿಕೆ:** 'ನಿವಾರ್' ಚಂಡಮಾರುತದ ಪರಿಣಾಮ ಬೆಂಗಳೂರಿನಲ್ಲಿ ಶುಕ್ರವಾರವೂ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಮುಂದುವರಿಸಲಾಗಿದೆ. ಶನಿವಾರದವರೆಗೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕನ್ನಡಪ್ರಭ

| Date | 27-11-2020 |
| --- | --- |
| Page No | 2 |

# ವೈಟ್‌ಟಾಪಿಂಗ್‌ಗಾಗಿ ಸಂಚಾರ ಮಾರ್ಗ ಬದಲು

ಬೆಂಗಳೂರು: ಬಿಬಿಎಂಪಿಯಿಂದ ನಗರದ ಥಣಿಸಂದ್ರ ಮುಖ್ಯರಸ್ತೆಯ ರೈಲ್ವೆ ಕೆಳಸೇತುವೆಯಿಂದ ಬೇಗೂರು ಜಂಕ್ಷನ್‌ವರೆಗೆ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಿರುವ ಹಿನ್ನೆಲೆಯಲ್ಲಿ ನ.27ರಿಂದ ಜ.10ರ ವರೆಗೆ ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ. ಸದರಿ ಕಾಮಗಾರಿ ಕೈಗೊಳ್ಳುವ ಹಿನ್ನೆಲೆಯಲ್ಲಿ ಸಂಚಾರ ಪೊಲೀಸರಿಂದ ಅನುಮತಿ ಪಡೆಯಲಾಗಿದೆ. ಕಾಮಗಾರಿ ನಿರ್ವಹಣೆ ವೇಳೆ ಸಾರ್ವಜನಿಕರು ಹಾಗೂ ವಾಹನ ಸಂಚಾರಕ್ಕೆ ಸಮಸ್ಯೆಯಾಗದಂತೆ ಪರ್ಯಾಯ ಮಾರ್ಗ ವ್ಯವಸ್ಥೆ ಮಾಡಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಕನ್ನಡಪ್ರಭ

| Date | 27-11-2020 |
| --- | --- |
| Page No | 2 |

# ಒಂದಂಕಿಗೆ ಇಳಿದ ಕೊರೋನಾ ಬಲಿ ಸಂಖ್ಯೆ

ಬೆಂಗಳೂರು: ರಾಜಧಾನಿಯಲ್ಲಿ ಕೊರೋನಾ ಸೋಂಕಿನ ಅಬ್ಬರ ತಗ್ಗಿದ್ದು, ಗುರುವಾರ 844 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಏಳು ಜನರು ಮೃತಪಟ್ಟಿದ್ದಾರೆ. 367 ಜನರು ಗುಣಮುಖರಾಗಿದ್ದಾರೆ. ಈವರೆಗೆ ನಗರದಲ್ಲಿ ಸೋಂಕಿಗೆ ಒಳಗಾದವರ ಒಟ್ಟು ಸಂಖ್ಯೆ 3,67,077ಕ್ಕೆ ಏರಿಕೆಯಾಗಿದೆ. ಅಂತೆಯೆ ಒಂದೇ ದಿನ 367 ಮಂದಿ ಗುಣಮುಖರಾಗಿದ್ದು, ಈವರೆಗಿನ ಗುಣಮುಖರ ಸಂಖ್ಯೆ 3,44,138ಕ್ಕೆ ಏರಿಕೆಯಾಗಿದೆ. ಈವರೆಗೆ ಸೋಂಕಿನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 4,108ಕ್ಕೆ ಏರಿಕೆಯಾಗಿದೆ. ಇನ್ನು ನಗರದ 372 ಕಾಲೇಜುಗಳಲ್ಲಿ ಗುರುವಾರ 941 ಮಂದಿಯನ್ನು ಕೊರೋನಾ ಸೋಂಕು ಪರೀಕ್ಷೆಗೆ ಒಳಪಡಿಸಿದ್ದು, ಐವರಿಗೆ ಕೊರೋನಾ ಪತ್ತೆಯಾಗಿದೆ.

ಕನ್ನಡಪ್ರಭ

| Date | 27-11-2020 |
| --- | --- |
| Page No | 4 |

# ನಗರಕ್ಕೆ ನಿವಾರ್ ಕ್ಷೀಣ: ಸಾಮಾನ್ಯ ಮಳೆ

## ನಿನ್ನೆ ದಿನವಿಡೀ ಮೋಡ ಕವಿದ ವಾತಾವರಣ | ಇಂದೂ ಕೂಡ ಮಳೆ ಸಾಧ್ಯತೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಭಾರಿ ಗಾಳಿ ಸಹಿತ 'ನಿವಾರ್' ಚಂಡಮಾರುತ ರಾಜ್ಯದ ದಕ್ಷಿಣ ಒಳನಾಡಿನ ಸಮೀಪ ಹಾದು ಹೋಗಿದ್ದರಿಂದ ಬೆಂಗಳೂರಿನ ಬಹುತೇಕ ಎಲ್ಲ ಕಡೆಗಳಲ್ಲಿ ಸಾಮಾನ್ಯ ಮಳೆ ಬಿದ್ದಿದೆ. ಯಲಹಂಕ ವಲಯದ ಆವಲಹಳ್ಳಿಯಲ್ಲಿ ಅಧಿಕ ಮಳೆ ಸುರಿದಿದೆ.

ಕೆಲವು ದಿನಗಳ ಹಿಂದೆ ಬಂಗಾಳಕೊಲ್ಲಿಯಲ್ಲಿ ಸೃಷ್ಟಿಯಾಗಿದ್ದ 'ನಿವಾರ್' ಚಂಡಮಾರುತ ಗುರುವಾರ ಬೆಳಗ್ಗೆ ತಮಿಳುನಾಡು ಮಾರ್ಗವಾಗಿ ಕಾರೈಕಲ್ ದಾಟಿದ್ದರಿಂದ ರಾಜಧಾನಿಯಲ್ಲಿ ಗುರುವಾರ ಬೆಳಗ್ಗೆಯಿಂದ ರಾತ್ರಿ 9ರವರೆಗೆ 30 ಮಿ.ಮೀ.ವರೆಗೂ ಮಳೆಯಾಗಿದೆ.

'ನಿವಾರ್' ರಾಜ್ಯದ ದಕ್ಷಿಣ ಒಳನಾಡು ಸಮೀಪಿಸುತ್ತಿದ್ದಂತೆ ನಗರದಲ್ಲಿ ಬುಧವಾರ ಕಂಡು ಬಂದಿದ್ದ ಚಳಿ ಹಾಗೂ ಮೋಡ ಕವಿದ ವಾತಾವರಣ ಗುರುವಾರಕ್ಕೂ ಮುಂದುವರಿಯಿತು. ಗುರುವಾರ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಕೆಂಗೇರಿ, ಮೈಸೂರು ರಸ್ತೆ, ವಿಜಯನಗರ, ರಾಜಾಜಿನಗರ, ಮೆಜೆಸ್ಟಿಕ್ ಸುತ್ತಮುತ್ತ, ಕೆ.ಆರ್.ಮಾರುಕಟ್ಟೆ, ಶಾಂತಿನಗರ, ಜಯನಗರ, ಚಾಮರಾಜಪೇಟೆ, ಹೆಬ್ಬಾಳ, ಯಲಹಂಕ, ದೇವನಹಳ್ಳಿ, ಬನಶಂಕರಿ, ಆರ್.ಆರ್‌ನಗರ ಸೇರಿದಂತೆ ಬಹುತೇಕ ಎಲ್ಲ ಬಡಾವಣೆಗಳಲ್ಲಿ ಸೋನೆ ಮಳೆ ಸಾಮಾನ್ಯವಾಗಿತ್ತು. ನಂತರ ಸಂಜೆಯಿಂದ ರಾತ್ರಿವರೆಗೂ ಹಗುರದಿಂದ ಸಾಧಾರಣ ಮಳೆ ಸುರಿಯಿತು.



ಮಳೆಯಿಂದಾಗಿ ವಿಧಾನಸೌಧದ ಮುಂಭಾಗದ ರಸ್ತೆಯಲ್ಲಿ ಛತ್ರಿ ಹಿಡಿದು ಸಾಗುತ್ತಿರುವ ಮಹಿಳೆಯರು

ಇನ್ನೆರಡು ದಿನ (ನ.27 ಮತ್ತು 28) ನಗರದಲ್ಲಿ ಸಾಮಾನ್ಯ ಮಳೆ ಹಾಗೂ ಮೋಡ ಕವಿದ ವಾತಾವರಣ ಮುಂದುವರಿಯಲಿದೆ. ನ.27ರಂದು ಕೆಲವು ಪ್ರದೇಶಗಳಲ್ಲಿ ತುಂತುರು ಮಳೆ ಬೀಳಬಹುದು. ತಾಪಮಾನ ಗರಿಷ್ಠ 24, ಕನಿಷ್ಠ 19 ಡಿಗ್ರಿ ಸೆಲ್ಸಿಯಸ್ ದಾಖಲಾಗಲಿದೆ. ಆದರೆ ನ.28ರಂದು ವರುಣ ತುಸು ಚುರುಕಾಗುವ ಲಕ್ಷಣ ಇದ್ದು, ಸಾಮಾನ್ಯದಿಂದ ಹಗುರ ಮಳೆ ಬೀಳಬಹುದು. ಅಂದು ಕ್ರಮವಾಗಿ ತಾಪಮಾನ 18 ಡಿಗ್ರಿ ಸೆಲ್ಸಿಯಸ್ ದಾಖಲಾಗಬಹುದು ಎಂದು ಕೆಎಸ್‌ಎನ್‌ಡಿಎಂಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

### ಸರಾಸರಿ 12.83 ಮಿ.ಮೀ. ಮಳೆ

ನಗರದಲ್ಲಿ ಸರಾಸರಿ 12.83 ಮಿ.ಮೀ ಮಳೆ ಆಗಿದ್ದು, ಯಲಹಂಕ ವಲಯದ ಆವಲಹಳ್ಳಿಯಲ್ಲಿ ಅತಿ ಹೆಚ್ಚು 29.5 ಮಿ.ಮೀ ಮಳೆ ಬಿದ್ದಿದೆ. ಉಳಿದಂತೆ ಮಂಡೂರು 29 ಮಿ.ಮೀ, ವರ್ತೂರು 27.5, ಕೆ.ಆರ್.ಪುರ ಹಾಗೂ ಎಚ್‌ಎಎಲ್ ವಿಮಾನ ನಿಲ್ದಾಣ ತಲಾ 26.5, ಬೆಳ್ಳಂದೂರು 25, ಮಾರತ್ತಹಳ್ಳಿ 24, ಚೆನ್ನಿಗಾನಹಳ್ಳಿ ಮತ್ತು ರಾಮಮೂರ್ತಿ ನಗರ ತಲಾ 23.5, ಗರುಡಾಚಾರ್‌ಪಾಳ್ಯ 22.5, ಕೋಣೇನ ಅಗ್ರಹಾರ 22, ಬಸವನಗುಡಿ, ವಿಜ್ಞಾನ ನಗರ ಮತ್ತು ಎಚ್‌ಎಸ್‌ಆರ್ ಬಡಾವಣೆ ತಲಾ 21, ಕೋರಮಂಗಲ, ಯಲಹಂಕ ಹಾಗೂ ಹೊರಮಾವಿನಲ್ಲಿ 19.5 ಮಿ.ಮೀ ಮಳೆ ಸುರಿದಿದೆ.

ಕನ್ನಡಪ್ರಭ

| Date | 27-11-2020 |
| --- | --- |
| Page No | 4 |


# ‘ಎಂಪಿಎಚ್ ವ್ಯಾಸಂಗಕ್ಕೆ ಹೊರಟ ವೈದ್ಯರಿಗೆ ಅನುಮತಿ ನೀಡಬೇಡಿ’

## ನಿಯಮ ಗಾಳಿಗೆ ತೂರಿ ಮತ್ತೆ ಅಧ್ಯಯನಕ್ಕೆ ಮುಂದಾದ ವೈದ್ಯರು: ರಮೇಶ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕಾನೂನು ನಿಯಮಗಳನ್ನು ಗಾಳಿಗೆ ತೂರಿ ಎಂಪಿಎಚ್ ಸ್ನಾತಕೋತ್ತರ ವ್ಯಾಸಂಗಕ್ಕೆ ಹೊರಟಿರುವ ಬಿಬಿಎಂಪಿಯ ಇಬ್ಬರು ವೈದ್ಯರಿಗೆ ಯಾವುದೇ ಕಾರಣಕ್ಕೆ ಅನುಮತಿ ನೀಡಬಾರದು ಎಂದು ಬಿಜೆಪಿ ಬೆಂಗಳೂರು ದಕ್ಷಿಣ ವಿಭಾಗದ ಅಧ್ಯಕ್ಷ ಎನ್.ಆರ್. ರಮೇಶ್ ಅವರು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ಅವರಿಗೆ ಮನವಿ ಮಾಡಿದ್ದಾರೆ.

ಬಿಬಿಎಂಪಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಡಾ.ರಾಮು ಮತ್ತು ಡಾ.ಸೈಯದ್ ಎಂಬುವರನ್ನು 2016-17ರಲ್ಲಿ ಪಾಲಿಕೆಯ ವಿಭಾಗದ ತಜ್ಞ ವೈದ್ಯರ ಕೊರತೆ ನೀಗಿಸುವ ಉದ್ದೇಶದಿಂದ ಬಿಬಿಎಂಪಿಯ ಕೋಟ್ಯಾಂತರ ಹಣ ಪಾವತಿಸಿ ಎಂಡಿಎಚ್ ಸ್ನಾತಕೋತ್ತರ ವ್ಯಾಸಂಗಕ್ಕೆ ಕಳುಹಿಸಿ ಕೊಡಲಾಗಿತ್ತು. ಮೂರು ವರ್ಷಗಳ ವ್ಯಾಸಂಗದ ವೇಳೆ ಇಬ್ಬರು ವೈದ್ಯರು ತಮ್ಮ ವೇತನ ಹಾಗೂ ಎಲ್ಲ ಭತ್ಯೆಗಳನ್ನು ಸಹ ಪಡೆದುಕೊಂಡಿದ್ದಾರೆ.

ಕಳೆದ ನಾಲ್ಕು ತಿಂಗಳ ಹಿಂದಷ್ಟೇ ಸ್ನಾತಕೋತ್ತರ ಪದವಿ ಪೂರೈಸಿ ಬಂದಿರುವ ಇಬ್ಬರು ವೈದ್ಯರು



ಪಾಲಿಕೆಯ ರೆಫರಲ್ ಆಸ್ಪತ್ರೆಗಳಲ್ಲಿ ಫಿಜಿಷಿಯನ್‌ಗಳಾಗಿ ಕಾರ್ಯ ನಿರ್ವಹಿಸಬೇಕಿತ್ತು. ಈ ಇಬ್ಬರು ವೈದ್ಯರು ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ಗಾಳಿಗೆ ತೂರಿ ಮತ್ತೊಮ್ಮೆ ಎಂಪಿಎಚ್ ಕೋರ್ಸ್ ಮಾಡಲು ತೆರಳಿದ್ದಾರೆ. ಕೂಡಲೇ ಇಬ್ಬರು ವೈದ್ಯರನ್ನು ವಾಪಸ್ ಕರೆಯಿಸಿ ಪಾಲಿಕೆಯ ರೆಫರಲ್ ಆಸ್ಪತ್ರೆಗಳಲ್ಲಿ ಅಥವಾ ಡಯಾಲಿಸಿಸ್ ಕೇಂದ್ರಗಳಲ್ಲಿ ಫಿಜಿಸಿಯನ್‌ಗಳನ್ನಾಗಿ ನಿಯೋಜಿಸಬೇಕು ಎಂದು ಮನವಿ ಮಾಡಿದ್ದಾರೆ.

ಕನ್ನಡಪ್ರಭ

| Date | 27-11-2020 |
| --- | --- |
| Page No | 4 |



ಸಂವಿಧಾನ ದಿನಾಚರಣೆ ಅಂಗವಾಗಿ ಗುರುವಾರ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸಂವಿಧಾನ ಶಿಲ್ಪಿ ಡಾ| ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಆಡಳಿತಾಧಿಕಾರಿ ಗೌರವ್ ಗುಪ್ತಾ ಹಾಗೂ ಆಯುಕ್ತ ಮಂಜುನಾಥ್ ಪ್ರಸಾದ್ ಪುಷ್ಪನಮನ ಸಲ್ಲಿಸಿದರು.

VK ವಿಜಯ ಕರ್ನಾಟಕ

| Date | 27-11-2020 |
| --- | --- |
| Page No | 9 |

ಶಿವರಾಮ ಕಾರಂತ ಬಡಾವಣೆ ಸಂತ್ರಸ್ತ ರೈತರ ಬವಣೆಗಿಲ್ಲ ಕೊನೆ | ಸುಪ್ರೀಂ ಆದೇಶದ ಬಳಿಕವೂ ಯೋಜನೆ ವಿಳಂಬ

# ಭೂ ಪರಿಹಾರ ನಿಗದಿ ಮರೆತ ಸರಕಾರ

■ **ಆರ್. ತುಳಸಿಕುಮಾರ್** ಬೆಂಗಳೂರು
tulasi.kumar@timesgroup.com

ಶಿವರಾಮ ಕಾರಂತ ಬಡಾವಣೆಗಾಗಿ ಸ್ವಾಧೀನಪಡಿಸಿಕೊಳ್ಳಲಿರುವ ಜಮೀನಿಗೆ ಪರಿಹಾರ ನಿಗದಿಪಡಿಸುವ ಕಡತಕ್ಕೆ ಮೋಕ್ಷ ನೀಡಲು ಸರಕಾರ ಮೀನಮೇಷ ಎಣಿಸುತ್ತಿದೆ.

**ಸ್ವಾಧೀನಪಡಿಸಿದ ಜಾಗದಲ್ಲಿ ಮನೆ ಕಟ್ಟಿರುವವರಿಗೆ ಸಿಗದ ನ್ಯಾಯ**

**ಮಾರುಕಟ್ಟೆ ದರದ ಪರಿಹಾರಕ್ಕೆ ರೈತರ ಪಟ್ಟು**



ಬಡಾವಣೆ ನಿರ್ಮಿಸಲು ಭೂಸ್ವಾಧೀನ ಪ್ರಕ್ರಿಯೆಯನ್ನು ಅಂತಿಮಗೊಳಿಸಿ ಮುಂದಿನ ಪ್ರಕ್ರಿಯೆ ಕೈಗೊಳ್ಳಲು ಸುಪ್ರೀಂ ಕೋರ್ಟ್ ಆದೇಶಿಸಿ ಹಲವು ತಿಂಗಳು ಕಳೆದಿವೆ. ಇದನ್ನಾಧರಿಸಿ ಬಿಡಿಎ, ಭೂಮಾಲೀಕರಿಗೆ ಪ್ರತಿ ಎಕರೆಗೆ ಶೇ.40ರಷ್ಟು ಅಭಿವೃದ್ಧಿಪಡಿಸಿದ ಜಮೀನು ವಿತರಿಸಲು ತೀರ್ಮಾನಿಸಿದೆ. ಈ ಪ್ರಸ್ತಾವವನ್ನು ಅನುಮೋದನೆಗಾಗಿ ಸರಕಾರಕ್ಕೆ ಕಳುಹಿಸಿ ಐದು ತಿಂಗಳು ಕಳೆದರೂ ಒಪ್ಪಿಗೆ ಸಿಕ್ಕಿಲ್ಲ.

**ಜಮೀನು ವಾಪಸಿಗೆ ಆಗ್ರಹ:** ದಶಕದಿಂದ ನನೆಗುದಿಗೆ ಬಿದ್ದಿರುವ ಪರಿಹಾರ ನಿಗದಿ ವಿಚಾರವೇ ಲೇಔಟ್ ರಚನೆ ಟೇಕಾಫ್ ಆಗಲು ಪ್ರಮುಖ ಅಡ್ಡಿಯಾಗಿದೆ. ಆರಂಭದಲ್ಲಿ ಸ್ಥಳೀಯ ಮಾರ್ಗಸೂಚಿ ದರದ ದುಪ್ಪಟ್ಟು ಹಣ ನೀಡುವ ಪ್ರಾಧಿಕಾರದ ಪ್ರಸಾವಕ್ಕೆ ರೈತರು ಆಕ್ಷೇಪಿಸಿದ್ದರು. ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಹಲವು ವರ್ಷಗಳೇ ಹಿಡಿದಿದೆ. ರೈತರು ಹೋರಾಟದ ಹಾದಿ ಹಿಡಿದ ಬಳಿಕ ಕಳೆದ ಜೂನ್ ತಿಂಗಳಲ್ಲಿ ಬಿಡಿಎ ಮಂಡಳಿ ಸಭೆಯಲ್ಲಿ 40:60 ಮಾದರಿಯಲ್ಲಿ ಭೂ ಪರಿಹಾರ ನೀಡುವ ಅಂತಿಮ ತೀರ್ಮಾನ ಕೈಗೊಳ್ಳಲಾಗಿದೆ. ಇದಕ್ಕೂ ರೈತರು ಆಕ್ಷೇಪಿಸಿದ್ದು, ಮಾರುಕಟ್ಟೆ ದರದಂತೆ ಪರಿಹಾರ ವಿತರಿಸಿದರೆ ಮಾತ್ರ ಜಮೀನು ಬಿಟ್ಟುಕೊಡಲು ಸಿದ್ಧ, ಇಲ್ಲದಿದ್ದರೆ ನಮ್ಮ ಜಮೀನನ್ನು ನಮಗೆ ವಾಪಸ್ ಮರಳಿಸಿ ಎಂದು ಬೇಡಿಕೆ ಇಟ್ಟಿದ್ದಾರೆ.

ಸದ್ಯ ಉದ್ದೇಶಿತ ಬಡಾವಣೆ ವ್ಯಾಪ್ತಿಯಲ್ಲಿ ಅರ್ಧದಷ್ಟು ಜಾಗದಲ್ಲಿ ವಾಸದ ಮನೆಗಳು ಹಾಗೂ ಕೈಗಾರಿಕೆ ಘಟಕಗಳು ಕಾರ್ಯಾಚರಿಸುತ್ತಿವೆ. ಬಡಾವಣೆ ರಚನೆಗೆ ಮುನ್ನವೇ ನಿರ್ಮಿಸಿರುವುದರಿಂದ ಇವುಗಳಿಗೂ ಪರಿಹಾರ ನೀಡಬೇಕಿದೆ. ಜತೆಗೆ ಸ್ವತಃ ಪ್ರಾಧಿಕಾರವು ಅಂತಿಮ ಅಧಿಸೂಚನೆ ಹೊರಡಿಸುವ ಮುನ್ನ 1000 ಎಕರೆಗೆ ಎನ್‌ಒಸಿ ನೀಡಿರುವುದರಿಂದ ಕಟ್ಟಡಗಳು ಮೇಲೆದ್ದಿವೆ. ಈ ಲೋಪವನ್ನು ಬಿಡಿಎ ಸುಪ್ರೀಂ ಕೋರ್ಟ್ ಗಮನಕ್ಕೆ ತಾರದೆ ನುಣುಚಿಕೊಂಡಿದೆ ಎಂಬುದು ರೈತರ ಆಕ್ರೋಶಕ್ಕೆ ಮತ್ತೊಂದು ಕಾರಣವಾಗಿದೆ.

**ಅವಾರ್ಡ್‌ಗೆ ಮುಂದಾದ ಬಿಡಿಎ:** ಇತ್ತೀಚೆಗೆ ಸುಪ್ರೀಂ ಕೋರ್ಟ್ ಬಡಾವಣೆ ರಚನೆ ಸಂಬಂಧ ಮುಂದಿನ ಪ್ರಕ್ರಿಯೆ ಕೈಗೊಳ್ಳದಿರುವ ಕುರಿತು ಆಕ್ಷೇಪಿಸಿ ಮಾಹಿತಿ ಕೋರಿದೆ. ಈ ಆದೇಶ ಹೊರಬೀಳುತ್ತಲೇ ಎಚ್ಚೆತ್ತಿರುವ ಬಿಡಿಎ, ಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ಅವಾರ್ಡ್ ನೀಡಲು ಮುಂದಾಗಿದೆ. ಪರಿಹಾರ ನಿಗದಿಯಾಗದೆ ಅವಾರ್ಡ್ ನೀಡಲು ಪ್ರಾಧಿಕಾರಕ್ಕೆ ಅಧಿಕಾರ ನೀಡಿದವರು ಯಾರು? ಎಂಬ ಪ್ರಶ್ನೆಯನ್ನು ರೈತರು ಮುಂದಿಟ್ಟಿದ್ದಾರೆ. ಸರಕಾರ ಅಂತಿಮ ನಿರ್ಧಾರ ಕೈಗೊಳ್ಳುವವರೆಗೂ ಪ್ರಾಧಿಕಾರ ಯಾವುದೇ ಸ್ವಯಂ ನಿರ್ಧಾರ ಕೈಗೊಳ್ಳಬಾರದು ಎಂದು ಎಚ್ಚರಿಸಿದೆ.

**ಬಿಡಿಎಗೆ ಬಡಾವಣೆ ನಿರ್ಮಿಸುವ ಸಾಮರ್ಥ್ಯ ಇಲ್ಲ. ಅರ್ಕಾವತಿ, ಕೆಂಪೇಗೌಡ ಲೇಔಟ್ ಪೂರ್ಣಗೊಳಿಸಲು ಹೆಣಗಾಡುತ್ತಿದೆ. ಕಾರಂತ ಬಡಾವಣೆ ವಿಚಾರದಲ್ಲಿ ರೈತರ ಹಕ್ಕನ್ನು ಕಸಿಯಲಾಗುತ್ತಿದೆ. ಮಾರುಕಟ್ಟೆ ದರ ನೀಡದಿದ್ದರೆ ಜಮೀನು ಬಿಟ್ಟುಕೊಡುವುದಿಲ್ಲ.**

**- ಬಿ.ಆರ್.ನಂಜುಂಡಪ್ಪ**
ಅಧ್ಯಕ್ಷ, ಶಿವರಾಮ ಕಾರಂತ ಬಡಾವಣೆ ಹೋರಾಟ ಸಮಿತಿ

**ಕಾರಂತ ಬಡಾವಣೆ ನಿರ್ಮಿಸುವ ಸಂಬಂಧ 40:60 ಮಾದರಿ ಭೂಪರಿಹಾರ ನಿಗದಿಪಡಿಸಿ ಒಪ್ಪಿಗೆಗಾಗಿ ಸರಕಾರಕ್ಕೆ ಕಳುಹಿಸಿಕೊಡಲಾಗಿದೆ. ಇದಕ್ಕೆ ಇನ್ನಷ್ಟೇ ಅನುಮೋದನೆ ಸಿಗಬೇಕಿದೆ. ಪರಿಹಾರ ನೀಡುವ ಸಂಬಂಧ ಅವಾರ್ಡ್ ಹಂಚಿಕೆ ಕಾರ್ಯ ಪ್ರಗತಿಯಲ್ಲಿದೆ.**

**- ಶಿವರಾಜು ಪಿ.**
ಉಪ ಆಯುಕ್ತರು (ಭೂಸ್ವಾಧೀನ ವಿಭಾಗ), ಬಿಡಿಎ

## ಬಡಾವಣೆ ವ್ಯಾಪ್ತಿ 3,546 ಎಕರೆ

ಬೆಂಗಳೂರು ಉತ್ತರ ತಾಲೂಕಿನ 17 ಹಳ್ಳಿಗಳಿಗೆ ಸೇರಿದ ಒಟ್ಟು 3,546 ಎಕರೆ ಜಮೀನು ಬಡಾವಣೆ ನಿರ್ಮಾಣಕ್ಕೆ ಗುರುತಿಸಲಾಗಿದೆ. ಸುಮಾರು 30 ಸಾವಿರ ನಿವೇಶನಗಳನ್ನು ರಚಿಸಲಿದ್ದು, ಈ ಪೈಕಿ 18 ಸಾವಿರ ಸೈಟ್‌ಗಳನ್ನು ನಾಗರಿಕರಿಗೆ ವಿತರಿಸುವ ಉದ್ದೇಶ ಇದೆ. ಉಳಿದ ಸೈಟ್‌ಗಳನ್ನು ಭೂ ಪರಿಹಾರ ಹಾಗೂ ಕಾರ್ನರ್ ಸೈಟ್ ಇತ್ಯಾದಿ ಹೆಸರಿನಲ್ಲಿ ಬಿಡಿಎ ಉಳಿಸಿಕೊಳ್ಳಲು ಆಲೋಚಿಸಿದೆ.

ವಿಜಯ ಕರ್ನಾಟಕ

| Date | 27-11-2020 |
|---|---|
| Page No | 9 |

# 844 ಮಂದಿಗೆ ಕೊರೊನಾ

**ಬೆಂಗಳೂರು:** ನಗರದಲ್ಲಿ ಹೊಸದಾಗಿ 844 ಮಂದಿಗೆ ಕೊರೊನಾ ಸೋಂಕು ತಗಲಿರುವುದು ದೃಢಪಟ್ಟಿದೆ. 7 ಮಂದಿ ಸಾವನ್ನಪ್ಪಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಇದುವರೆಗೆ ಸೋಂಕಿತರ ಸಂಖ್ಯೆ 3,67,077ಕ್ಕೆ ಏರಿದೆ. ಈ ಪೈಕಿ 3,44,138 ಮಂದಿ ಚೇತರಿಸಿಕೊಂಡಿದ್ದು, 18,830 ರೋಗಿಗಳು ನಿಗದಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೋವಿಡ್ ಸೋಂಕಿಗೊಳಗಾದವರಲ್ಲಿ 4108 ಮಂದಿ ಮೃತಪಟ್ಟಿದ್ದಾರೆ.

VK
ವಿಜಯ ಕರ್ನಾಟಕ

| Date | 27-11-2020 |
|---|---|
| Page No | 9 |

# ಜಿಟಿಜಿಟಿ ಮಳೆ, ಚಳಿಗೆ ನಡುಗಿದ ಬೆಂಗಳೂರಿಗರು



■ **ವಿಕ ಸುದ್ದಿಲೋಕ** ಬೆಂಗಳೂರು

ಗುರುವಾರ ಬೆಳ್ಳಂಬೆಳಗ್ಗೆಯೇ ಮೋಡ ಕವಿದ ವಾತಾವರಣದೊಂದಿಗೆ ಜಿಟಿ ಜಿಟಿ ಮಳೆ ಸುರಿಯಲಾರಂಭಿಸಿದ ಪರಿಣಾಮ ನಗರದ ಜನಜೀವನ ಅಸ್ತವ್ಯಸ್ತಗೊಂಡಿತ್ತು. ರಾತ್ರಿಯೂ ಮಳೆ ಸುರಿಯುತ್ತಿದ್ದರಿಂದ ಜನರು ಇನ್ನಷ್ಟು ಹೈರಾಣಾದರು.

ಉಷ್ಣಾಂಶ ಇಳಿಕೆಯಾದ್ದರಿಂದ ಚಳಿಯ ಪ್ರಮಾಣವೂ ಹೆಚ್ಚಾಯಿತು. ಹೀಗಾಗಿ ಜನ ಸ್ವೆಟರ್, ಜರ್ಕಿನ್‌ಗಳ ಮೊರೆ ಹೋದರು. ಮಕ್ಕಳು, ವೃದ್ಧರಾದಿಯಾಗಿ ಎಲ್ಲರೂ ನಡುಗುತ್ತಾ ಮನೆಯಿಂದ ಹೊರಬರಲು ಹಿಂದೇಟು ಹಾಕುವಂತಾಯಿತು. ಅಷ್ಟೇ ಅಲ್ಲ, ಕಚೇರಿಗಳ ಎಸಿ ಸ್ಥಗಿತಗೊಂಡರೆ, ವಾಹನಗಳಲ್ಲಿ ಸಂಚರಿಸುವವರು ಕಿಟಕಿ ಗಾಜು ಏರಿಸಿ ಸಾಗುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ನಡೆದು ಸಾಗುವವರು ಛತ್ರಿಯ ಆಶ್ರಯದಲ್ಲೇ ಸಾಗುತ್ತಿದ್ದರು.

**ಇಂದು ಮುಂದುವರಿಯುವ ಮಳೆ**

ನಿವಾರ್ ಚಂಡಮಾರುತದ ಪರಿಣಾಮ ನಗರದಲ್ಲಿ ಶುಕ್ರವಾರವೂ ಮಳೆ ಮುಂದುವರಿಯಲಿದೆ. ಜೋರು ಮಳೆಯಾಗದಿದ್ದರೂ, ಸಾಧಾರಣ ಪ್ರಮಾಣದ ವರ್ಷಧಾರೆಯಾಗಲಿದೆ. ಕೆಲ ಸೀಮಿತ ಪ್ರದೇಶಗಳಲ್ಲಿ ಮಾತ್ರ ಹೆಚ್ಚು ಪ್ರಮಾಣದ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸುದ್ದಿ ಕಾರ್ನರ್

# ವೈಟ್ ಟಾಪಿಂಗ್‌ಗಾಗಿ ವಾಹನ ನಿರ್ಬಂಧ

» ಜ. 10 ರವರೆಗೆ ನಿಷೇಧ

**ಬೆಂಗಳೂರು:** ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಿರುವ ಹಿನ್ನೆಲೆಯಲ್ಲಿ ಥಣಿಸಂದ್ರ ಮುಖ್ಯರಸ್ತೆಯ ಅರ್ಧ ಭಾಗದಲ್ಲಿ 2021ರ ಜನವರಿ 10ರವರೆಗೆ ವಾಹನಸಂಚಾರ ನಿಷೇಧಿಸಲಾಗಿದೆ. ಥಣಿಸಂದ್ರ ಮುಖ್ಯರಸ್ತೆಯಲ್ಲಿ ರೈಲ್ವೆ ಕೆಳಸೇತುವೆಯಿಂದ ಬೇಗೂರು ಜಂಕ್ಷನ್‌ವರೆಗೆ ಶುಕ್ರವಾರದಿಂದ ಕಾಮಗಾರಿ ಆರಂಭವಾಗಲಿದೆ. ಈ ಪ್ರದೇಶದ ಅರ್ಧಭಾಗ ರಸ್ತೆಯಲ್ಲಿ 2021ರ ಜ.10ರವರೆಗೆ ವಾಹನ ಸಂಚಾರ ನಿರ್ಬಂಧವಿರಲಿದೆ. ಉಳಿದರ್ಧ ಭಾಗದಲ್ಲಿ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗುತ್ತದೆ ಎಂದು ಬಿಬಿಎಂಪಿ ತಿಳಿಸಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 27-11-2020 |
| --- | --- |
| Page No | 5B |




ಸಂವಿಧಾನ ದಿನದ ಅಂಗವಾಗಿ ಗುರುವಾರ ಬಿಬಿಎಂಪಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಆಡಳಿತಾಧಿಕಾರಿ ಗೌರವ್ ಗುಪ್ತ, ಆಯುಕ್ತ ಮಂಜುನಾಥ ಪ್ರಸಾದ್ ಗೌರವ ಸಲ್ಲಿಸಿದರು.



# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೇಂದ್ರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು–560002.

## ಸಾರ್ವಜನಿಕ ಪ್ರಕಟಣೆ

## ಸಹಾಯ 2.0 ತಂತ್ರಾಂಶದ ಕಾರ್ಯವಿಧಾನ ಮಾಹಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಾಗರಿಕರು ತಮ್ಮ ಕುಂದು ಕೊರತೆಗಳನ್ನು ದಾಖಲಿಸಲು "ಸಹಾಯ 2.0" ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ತಂತ್ರಾಂಶವು "ನಮ್ಮ ಬೆಂಗಳೂರು" ಆ್ಯಪ್‌ನಲ್ಲಿ ಲಭ್ಯವಿರುತ್ತದೆ. ಈ ತಂತ್ರಾಂಶವು ಈ ಕೆಳಕಂಡ ವೈಶಿಷ್ಟ್ಯತೆಗಳನ್ನು ಹೊಂದಿರುತ್ತದೆ.

ಸಹಾಯ 2.0 ತಂತ್ರಾಂಶವನ್ನು "ಹೊಸ ವೈಶಿಷ್ಟ್ಯತೆಗಳು" ಹಾಗೂ "ಹೆಚ್ಚು ಬಳಕೆದಾರ ಸ್ನೇಹಿ"ಯನ್ನಾಗಿ ಅಭಿವೃದ್ಧಿಪಡಿಸಲಾಗಿದೆ.

1. ನಾಗರಿಕರು ತಮ್ಮ ಕುಂದುಕೊರತೆಗಳನ್ನು 'ನಮ್ಮ ಬೆಂಗಳೂರು ಮೊಬೈಲ್ ಅಪ್ಲಿಕೇಷನ್', 'ಬಿಬಿಎಂಪಿ ವೆಬ್ ಪೋರ್ಟಲ್', 'ಬಿಬಿಎಂಪಿ 24/7 ಕಾಲ್ ಸೆಂಟರ್: 080-22660000', 'ವಾಟ್ಸಾಪ್ ಸಂಖ್ಯೆ: +91 9480685700' ಹಾಗೂ ಸಾಮಾಜಿಕ ಮಾಧ್ಯಮಗಳಾದ 'ಫೇಸ್‌ಬುಕ್', 'ಟ್ವಿಟರ್'ಗಳ ಮೂಲಕ ಸಲ್ಲಿಸಬಹುದಾಗಿದ್ದು, ಸದರಿ ದೂರುಗಳು ಅಂತಿಮವಾಗಿ ಸಹಾಯ 2.0 ತಂತ್ರಾಂಶದಲ್ಲಿ ದಾಖಲಾಗುತ್ತವೆ.
2. ನಾಗರಿಕರು ಸಹಾಯ 2.0 ದಲ್ಲಿ ದೂರುಗಳನ್ನು ದಾಖಲಿಸಿದ ಕೂಡಲೇ ದೂರುದಾರರಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಎಸ್.ಎಂ.ಎಸ್. ಮೂಲಕ ಮಾಹಿತಿ ವಿನಿಮಯವಾಗುತ್ತದೆ. ಅಲ್ಲದೇ ದೂರುದಾರರು ತಮ್ಮ ದೂರಿನ ಸ್ಥಿತಿಗತಿಗಳನ್ನು 'ನಮ್ಮ ಬೆಂಗಳೂರು' ಅಪ್ಲಿಕೇಷನ್ ಮೂಲಕ ತಿಳಿದುಕೊಳ್ಳಬಹುದಾಗಿರುತ್ತದೆ.
3. ದೂರು ದಾಖಲಿಸಿದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರಿನ ಸಂಕ್ಷಿಪ್ತ ಮಾಹಿತಿಯ ನೋಟಿಫಿಕೇಷನ್ ರವಾನೆಯಾಗುತ್ತದೆ ಹಾಗೂ ಗೂಗಲ್ ಮ್ಯಾಪ್ ಸಮೇತ ಸಂಪೂರ್ಣ ವಿವರಗಳು ಮತ್ತು ಸ್ಥಳದ ಮಾಹಿತಿ ತಂತ್ರಾಂಶದಲ್ಲಿ ಲಭ್ಯವಾಗುತ್ತದೆ.
4. ಪಾಲಿಕೆ ಅಧಿಕಾರಿಗಳಿಗೆ ಪ್ರತಿ ದೂರನ್ನೂ ಪರಿಹರಿಸಲು ಸಮಯದ ಮಿತಿಯನ್ನು ನಿಗದಿಪಡಿಸಲಾಗಿದ್ದು, ಒಂದು ವೇಳೆ ನಿಗದಿತ ಸಮಯದಲ್ಲಿ ದೂರುಗಳನ್ನು ಪರಿಹರಿಸದಿದ್ದಲ್ಲಿ, ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನೆಯಾಗುತ್ತದೆ ಹಾಗೂ ಸದರಿ ಮಾಹಿತಿಯು ಎಸ್.ಎಂ.ಎಸ್. ಮೂಲಕ ದೂರುದಾರರಿಗೂ ಸಹ ರವಾನೆಯಾಗುತ್ತದೆ.
5. ಅನುಮೋದನೆ / ಅನುದಾನ / ಕಾಲಾವಕಾಶದ ಅವಶ್ಯಕತೆ ಇರುವ ದೂರುಗಳನ್ನು "ದೀರ್ಘಾವಧಿ ದೂರುಗಳು" ಪಟ್ಟಿಗೆ ಸೇರಿಸಲು ವ್ಯವಸ್ಥೆ ಕಲ್ಪಿಸಲಾಗಿದ್ದು, ಈ ಸಂಬಂಧ ದೂರುದಾರರಿಗೆ ಎಸ್ಎಂಎಸ್ ಮೂಲಕ ಮಾಹಿತಿ ರವಾನೆಯಾಗುತ್ತದೆ.
6. ಪಾಲಿಕೆ ಅಧಿಕಾರಿಗಳು ದೂರನ್ನು ಪರಿಹರಿಸಿದ ಕೂಡಲೇ ದೂರುದಾರರಿಗೆ ಎಸ್ಎಂಎಸ್ ಮೂಲಕ ಮಾಹಿತಿಯು ರವಾನೆಯಾಗುತ್ತದೆ ಮತ್ತು ಕೈಗೊಂಡಿರುವ ಕ್ರಮದ ಬಗ್ಗೆ ದೂರುದಾರರು ತಮ್ಮ ಅಭಿಪ್ರಾಯಗಳನ್ನು ದಾಖಲಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.
7. ಅಧಿಕಾರಿಗಳು ಹಾಗೂ ದೂರುದಾರರು ದೂರಿಗೆ ಸಂಬಂಧಪಟ್ಟ ಪರಿಹಾರಕ್ಕೆ ಮೊದಲು ಮತ್ತು ನಂತರದ ಛಾಯಾಚಿತ್ರವನ್ನು ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.
8. ನಾಗರಿಕರು ಪಾಲಿಕೆಗೆ ಸಂಬಂಧಿಸಿದ 'ರಸ್ತೆಗುಂಡಿಗಳು', 'ಪಾದಚಾರಿ ಮಾರ್ಗಗಳು', 'ಬೀದಿ ದೀಪಗಳು', 'ಕಸ ವಿಲೇವಾರಿ' ಮುಂತಾದ ಯಾವುದೇ ದೂರುಗಳನ್ನು ಸಹಾಯ 2.0 ತಂತ್ರಾಂಶದಲ್ಲಿ ದಾಖಲಿಸಬಹುದಾಗಿರುತ್ತದೆ.
9. ನಾಗರಿಕರು 'ನಮ್ಮ ಬೆಂಗಳೂರು' ತಂತ್ರಾಂಶವನ್ನು Play store: nammabengaluru ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.




ಸಹಿ/– ಆಯುಕ್ತರು, ಬಿ.ಬಿ.ಎಂ.ಪಿ

ವಿಜಯವಾಣಿ
ಕನ್ನಡಿಗರ ಧ್ವನಿ

| Date | 27-11-2020 |
| --- | --- |
| Page No | 5B |

### ಕೋವಿಡ್ ಆರೋಗ್ಯ ಸಿಬ್ಬಂದಿಗೆ ಸೋಂಕು ಭೀತಿ | ಕಿಟ್ ನೀಡದ ಬಿಬಿಎಂಪಿ

# ಪಿಪಿಇ ಕಿಟ್ ಧರಿಸದೆ ಕರೊನಾ ಪರೀಕ್ಷೆ!

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಗರದಲ್ಲಿ ಪಾಲಿಕೆ ವತಿಯಿಂದ ಕೈಗೊಳ್ಳುವ ಕೋವಿಡ್ ಪರೀಕ್ಷೆ ಮತ್ತು ಆರೋಗ್ಯ ತಪಾಸಣೆ ಶಿಬಿರಗಳಲ್ಲಿ ಪಿಪಿಇ ಕಿಟ್ ಬಳಕೆ ಪ್ರಮಾಣ ಶೇ.50 ಕಡಿಮೆಯಾಗಿದೆ. ಇದರಿಂದಾಗಿ ಆರೋಗ್ಯ ಸಿಬ್ಬಂದಿಗೆ ಕರೊನಾ ಸೋಂಕು ಹರಡುವ ಭೀತಿ ಎದುರಾಗಿದೆ.

ರಾಜ್ಯದ ಕರೊನಾ ಸೋಂಕಿತರಲ್ಲಿ ಶೇ.45ಕ್ಕೂ ಹೆಚ್ಚು ಪ್ರಕರಣಗಳು ರಾಜಧಾನಿಯಲ್ಲಿ ಕಂಡುಬರುತ್ತಿವೆ. ನಗರದಲ್ಲಿ ಪ್ರತಿನಿತ್ಯ 50 ಸಾವಿರಕ್ಕೂ ಅಧಿಕ ಸೋಂಕು ಪರೀಕ್ಷೆ ಮಾಡುವ ಗುರಿಯನ್ನು ಬಿಬಿಎಂಪಿ ಪಾಲಿಸುತ್ತಿದೆ. ಈ ಗುರಿ ತಲುಪಲು 141 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 450ಕ್ಕೂ ಹೆಚ್ಚು ಮೊಬೈಲ್ ಘಟಕದ ಮೂಲಕ ಕೋವಿಡ್ ಪರೀಕ್ಷೆ ಕೈಗೊಳ್ಳಲಾಗುತ್ತಿದೆ. ಆದರೆ, ಇಲ್ಲಿ ಕೆಲಸ ಮಾಡುವ 1,500ಕ್ಕೂ ಅಧಿಕ ಆರೋಗ್ಯ ಸಿಬ್ಬಂದಿಗಳಲ್ಲಿ ಶೇ.60 ಮಂದಿ ಪಿಪಿಇ ಕಿಟ್ ಧರಿಸದೆ ಕರೊನಾ ಪರೀಕ್ಷಾ ಕಾರ್ಯದಲ್ಲಿ ಭಾಗಿಯಾಗುತ್ತಿದ್ದಾರೆ.

**ಸೋಂಕು ಭೀತಿ:** ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 10 ತಂಡಗಳನ್ನು ರಚಿಸಿ ಗಂಟಲು ದ್ರವ ಸಂಗ್ರಹ ಗುರಿ ನೀಡಲಾಗುತ್ತದೆ. ಈ 10 ಮಂದಿಯಲ್ಲಿ ತಲಾ ಒಬ್ಬ ಸ್ವಾಬ್ ಕಲೆಕ್ಟರ್ ಹಾಗೂ ದತ್ತಾಂಶ ಸಂಗ್ರಹಣೆ ಸಿಬ್ಬಂದಿ ಒಳಗೊಂಡ ಇಬ್ಬರ ತಂಡ ರಚಿಸಿ ಸ್ವಾಬ್ ಸಂಗ್ರಹಣೆಗೆ ಕಳಿಸಲಾಗುತ್ತದೆ. ಇದರಲ್ಲಿ ಒಬ್ಬರಿಗೆ ಮಾತ್ರ ಪಿಪಿಇ ಕಿಟ್ ನೀಡಲಾಗುತ್ತಿದ್ದು, ಉಳಿದ ಸಿಬ್ಬಂದಿ ನೇರವಾಗಿ ಜನರೊಂದಿಗೆ ಸಂಪರ್ಕ ಹೊಂದುವ ಮೂಲಕ ಸೋಂಕಿಗೆ ಒಳಗಾಗುವ ಸಾಧ್ಯತೆಯಿದೆ. ಎಲ್ಲ ಸಿಬ್ಬಂದಿ ಪಿಪಿಇ ಕಿಟ್ ಧರಿಸಿದರೆ ಮಾತ್ರ ಸೋಂಕು ಹರಡುವಿಕೆ ತಡೆಗಟ್ಟಬಹುದಾಗಿದೆ.

**ಸೋಂಕು ಆತಂಕ:** ಪ್ರತಿನಿತ್ಯ ಕರೊನಾ ಪರೀಕ್ಷೆ ಮಾಡುವ ಸಿಬ್ಬಂದಿ ಪಿಪಿಇ ಕಿಟ್ ಧರಿಸದಿರುವ ಹಿನ್ನೆಲೆಯಲ್ಲಿ ಸೋಂಕು ಬಂದಿರುವ ಸಾಧ್ಯತೆ ಇರುತ್ತದೆ. ಈ ವೇಳೆ ಪರೀಕ್ಷಾ ಸಿಬ್ಬಂದಿಯಿಂದ ಸಾರ್ವಜನಿಕರಿಗೂ ಸೋಂಕು ಹರಡುವ ಸಾಧ್ಯತೆಯಿದೆ. ಕರೊನಾ ಸೋಂಕಿನ ಲಕ್ಷಣಗಳಿದ್ದವರನ್ನು ಪತ್ತೆ ಮಾಡಲು ಮಧುಮೇಹ, ರಕ್ತದೊತ್ತಡ, ಕ್ಷಯ, ಜ್ವರ ತಪಾಸಣೆ ಕೇಂದ್ರಗಳನ್ನು ಆಯೋಜಿಸಲಾಗುತ್ತಿದೆ. ಪೌರ ಕಾರ್ಮಿಕರಿಗೂ ಮಾಸಿಕ ಆರೋಗ್ಯ ತಪಾಸಣೆ ಕೇಂದ್ರದ ಮೂಲಕ ನಿಯಮಿತ ಆರೋಗ್ಯ ಪರೀಕ್ಷೆ ಮಾಡಲಾಗುತ್ತಿದೆ. ಇಲ್ಲಿ ತಪಾಸಣೆ ಮಾಡಿಸಿಕೊಳ್ಳಲು ಬರುವವರಿಗೆ ಸೋಂಕು ಇರುವ ಸಾಧ್ಯತೆಗಳಿರುತ್ತವೆ. ಆದರೆ, ಶಿಬಿರಗಳಲ್ಲಿ ಪಾಲ್ಗೊಳ್ಳುವ ಆರೋಗ್ಯ ಸಿಬ್ಬಂದಿ ಪಿಪಿಇ ಕಿಟ್ ಧರಿಸದೆ ಚಿಕಿತ್ಸೆ ನೀಡುತ್ತಿದ್ದಾರೆ.

## ಹೆಚ್ಚು ಅವಧಿ ಕಿಟ್ ಧರಿಸಲಾಗದು

**ಪಾಲಿಕೆ ವತಿಯಿಂದ ಒಂದು ಪರೀಕ್ಷಾ ಘಟಕದಲ್ಲಿ ಎಷ್ಟೇ ಸಿಬ್ಬಂದಿಯಿದ್ದರೂ, ಗಂಟಲು ದ್ರವ ಸಂಗ್ರಹ ಮಾಡುವ ಒಬ್ಬರಿಗೆ ಮಾತ್ರ ಪಿಪಿಇ ಕಿಟ್ ನೀಡಲಾಗುತ್ತಿದೆ. ಒಬ್ಬ ವ್ಯಕ್ತಿ 3 ರಿಂದ 4 ಗಂಟೆ ಮಾತ್ರ ಕಿಟ್ ಧರಿಸಬಹುದು. ಆದರೆ, ಗಂಟಲು ದ್ರವ ಸಂಗ್ರಹ ಗುರಿ ವಿಳಂಬವಾದಲ್ಲಿ ಸ್ವಾಬ್ ಕಲೆಕ್ಟರ್‌ಗಳು ಪಿಪಿಇ ಕಿಟ್ ತೆಗೆದು ಹಾಕುತ್ತಾರೆ. ಹೀಗಾಗಿ ಪರೀಕ್ಷೆ ವೇಳೆ ಎಲ್ಲರೂ ಪಿಪಿಇ ಕಿಟ್ ಧರಿಸಲು ಸಾಧ್ಯವಾಗುತ್ತಿಲ್ಲ ಎಂದು ಸಿಬ್ಬಂದಿ ತಿಳಿಸಿದ್ದಾರೆ.**

## ಗುರುವಾರ 844 ಸೋಂಕಿತರು

**ಬೆಂಗಳೂರು:** ರಾಜಧಾನಿಯಲ್ಲಿ ಗುರುವಾರ 844 ಜನರಲ್ಲಿ ಕರೊನಾ ಪತ್ತೆಯಾಗಿದ್ದು, ಒಟ್ಟು ಸೋಂಕಿತರ ಸಂಖ್ಯೆ 3,67,077ಕ್ಕೆ ಏರಿಕೆಯಾಗಿದೆ. 367 ಮಂದಿ ಗುಣಮುಖರಾಗಿದ್ದು, ಈವರೆಗೆ 3,44,138 ಡಿಸ್ಚಾರ್ಜ್ ಆಗಿದ್ದಾರೆ. ವಿವಿಧ ಆಸ್ಪತ್ರೆಗಳಲ್ಲಿ ಹಾಗೂ ಹೋಂ ಕ್ವಾರಂಟೈನ್‌ನಲ್ಲಿ 18,830 ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. ಗುರುವಾರ 7 ಮಂದಿ ನಿಧನರಾಗಿದ್ದು, ಒಟ್ಟು ಸಂಖ್ಯೆ 4,108 ತಲುಪಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 27-11-2020 |
| --- | --- |
| Page No | 12 |

# ರಾಜಧಾನಿಯಲ್ಲಿ ಮಲ ಹೊರುತ್ತಿದ್ದಾರೆ 1,139 ಮಂದಿ!

» ಸಮೀಕ್ಷೆಯಲ್ಲಿ ಬಹಿರಂಗ

**ಬೆಂಗಳೂರು:** ಮಲಹೊರುವ ಪದ್ಧತಿ ನಿಷೇಧಿಸಿ ವರ್ಷಗಳೇ ಕಳೆದಿದ್ದರೂ ರಾಜಧಾನಿಯಲ್ಲಿ 1,139 ಮಂದಿ ಮಲ ಹೊರುವ ಕೆಲಸ ಮಾಡುತ್ತಿದ್ದಾರೆ.

ನಗರದ 5 ವಲಯಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಈ ಅಂಕಿ ಅಂಶ ದೊರೆತಿದೆ. ಮತ್ತಷ್ಟು ಜನರು ಇರುವ ಸಾಧ್ಯತೆಯಿದೆ. ಈ ಕುರಿತು ಮರು ಸಮೀಕ್ಷೆಗೆ ಬಿಬಿಎಂಪಿ ಆಯುಕ್ತರು ಚಾಲನೆ ನೀಡಿದ್ದು, ಮಲ ಹೊರುವವಲ್ಲಿ ತೊಡಗಿದವರನ್ನು ಗುರುತಿಸಿ, ಪರ್ಯಾಯ ಜೀವನೋಪಾಯ ಕಲ್ಪಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಪಾಲಿಕೆ ವ್ಯಾಪ್ತಿಯಲ್ಲಿ, ಕೈ ಮೂಲಕ ಮಲಗುಂಡಿ ಸ್ವಚ್ಛಗೊಳಿಸುವವರ ವಿಶೇಷ ಮರುಸಮೀಕ್ಷೆ ಕುರಿತು ಸಭೆ ನಡೆಯಿತು. ಪಾಲಿಕೆಯ 8 ವಲಯಗಳ ಪೈಕಿ ಯಲಹಂಕ, ಬೊಮ್ಮನಹಳ್ಳಿ ಹಾಗೂ ದಾಸರಹಳ್ಳಿ ಹೊರತುಪಡಿಸಿ ನಡೆಸಿದ ಸಮೀಕ್ಷೆಯಲ್ಲಿ 1,139 ಜನರನ್ನು ಗುರುತಿಸಲಾಗಿದೆ ಎಂದು ಮಾಹಿತಿ ನೀಡಲಾಯಿತು.

ವಿಶ್ವವಾಣಿ

| Date | 27-11-2020 |
| --- | --- |
| Page No | 3 |

ಮತ್ತೆರಡು ದಿನ ಭಾರಿ ಮಳೆಯ ಮುನ್ನೆಚ್ಚರಿಕೆ । ದಿನವಿಡೀ ಸುರಿದ ಮಳೆಗೆ ಜನರು ಹೈರಾಣ । ಯೆಲ್ಲೋ ಅಲರ್ಟ್ ಘೋಷಣೆ

# ನಿವಾರ್ ಪ್ರಭಾವದಿಂದ ನಗರದಲ್ಲಿ ಜಿಟಿಜಿಟಿ ಮಳೆ



ಹೊಸಗುಡ್ಡದಹಳ್ಳಿಯಲ್ಲಿ ಮಳೆಯಿಂದಾಗಿ ನಿಂತ ವ್ಯಾಪಾರ.



ಬ್ರಿಗೇಡ್ ರೋಡ್‌ನಲ್ಲಿ ಕೊಡೆ ಹಿಡಿದು ಕೆಲಸಕ್ಕೆ ಹೊರಟ ಯುವತಿಯರು.



ಹೊಸಗುಡ್ಡದಹಳ್ಳಿಯಲ್ಲಿ ಮಳೆಯಿಂದಾಗಿ ರಕ್ಷಣೆ ಪಡೆದ ವ್ಯಾಪಾರಿಗಳು.

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ನಿವಾರ್ ಚಂಡಮಾರುತ ಪರಿಣಾಮದಿಂದ ರಾಜ್ಯದ ಹಲವೆಡೆ ಮಳೆಯಾಗುತ್ತಿದೆ. ರಾಜ್ಯ ರಾಜಧಾನಿಯಲ್ಲಿ ಗುರುವಾರ ಮುಂಜಾನೆಯಿಂದಲೇ ಮೋಡಕವಿದ ವಾತಾವರಣವಿದ್ದು, ಜಿಟಿ ಜಿಟಿ ಮಳೆ ಬೀಳುತ್ತಿದೆ.



ನಗರದಲ್ಲಿ ಸ್ವಲ್ಪ ಹೊತ್ತು ಮೋಡ ಕವಿದ ವಾತಾವರಣವಿದ್ದರೂ ಬಳಿಕ ಜೋರು ಮಳೆಯಾಗಿದೆ. ಇದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗಿದ್ದು, ಅನೇಕ ಕಡೆಗಳಲ್ಲಿ ಟ್ರಾಫಿಕ್ ಜಾಮ್ ಏರ್ಪಟ್ಟಿತ್ತು. ಬೆಳಗಿನಿಂದಲೇ ಸುರಿದ ಮಳೆಯಿಂದಾಗಿ ಸವಾರರಿಗೆ ಸ್ವಲ್ಪ ತೊಂದರೆಯಾಗಿದ್ದು, ಅಲ್ಲಲ್ಲಿ ಸಾರ್ವಜನಿಕರು ನಿಂತಿರುವ ದೃಶ್ಯ ಸಾಮಾನ್ಯವಾಗಿತ್ತು. ಇನ್ನು ನಗರದ ಹೆಬ್ಬಾಳ, ಕೋರಮಂಗಲ, ಮಲ್ಲೇಶ್ವರಂ, ಮೆಜೆಸ್ಟಿಕ್ ಹೀಗೆ ಪ್ರಮುಖ ಸ್ಥಳಗಳಲ್ಲಿ ಗಾಳಿಸಹಿತ ಮಳೆಯಾಗುತ್ತಿದ್ದು, ಇದರಿಂದ ವಾಹನ ಸವಾರರು ನಿಧಾನಗತಿಯಲ್ಲಿ ತೆರಳುವುದು ಅನಿವಾರ್ಯವಾಗಿತ್ತು, ಪ್ರಮುಖ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗಿದ್ದರಿಂದ ಸಂಚಾರಿ ಪೊಲೀಸರು ಸಂಚಾರ ದಟ್ಟಣೆ ನಿವಾರಿಸುವಲ್ಲಿ ನಿರತರಾಗಿದ್ದರು.

ಅಷ್ಟೇ ಅಲ್ಲದೆ ಕೆಲಸ ಕಾರ್ಯಗಳಿಗೆ ಹೋಗುವವರು ಕೊಡೆಯ ಆಶ್ರಯ ಪಡೆದು ಮಳೆಯಲ್ಲೇ ಹೆಜ್ಜೆ ಹಾಕುವಂತಾಯಿತು.

ನಗರದಲ್ಲಿ ಬೆಳಗಿನಿಂದ ಸುರಿದ ಮಳೆಯ ಪ್ರಮಾಣವು 2.5 ಮಿಮೀ ನಷ್ಟಿದೆ. ನ.28ರವರೆಗೂ ಇದೇ ಹವಾಮಾನ ಮುಂದುವರಿಯಲಿದ್ದು, ಶುಕ್ರವಾರ ಮೋಡ ಕವಿದ ವಾತಾವರಣ ಹಾಗೂ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಚಂಡಮಾರುತದ ಪರಿಣಾಮ ಬೆಂಗಳೂರು ನಗರ, ಗ್ರಾಮಾಂತರ ಸೇರಿದಂತೆ ಅನೇಕ ಕಡೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ರಾಮನಗರ, ಚಾಮರಾಜನಗರ ಜಿಲ್ಲೆಗಳಲ್ಲಿ ಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಗಳಿರುವ ಹಿನ್ನೆಲೆ ಶುಕ್ರವಾರ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಪುನಃ ಇದೇ ಭಾಗದ ಕೆಲವು ಜಿಲ್ಲೆಗಳಲ್ಲಿ ನ.28 ಮತ್ತು 29ರಂದು ಅಲ್ಲಲ್ಲಿ ಸಾಮಾನ್ಯ ಮಳೆಯಾಗಲಿದೆ. ಎಲ್ಲಾ ಕಡೆಗಳಲ್ಲಿ ಮೋಡ ಮುಸುಕಿದ ಮತ್ತು ಚಳಿಯ ವಾತಾವರಣ ಇರಲಿದೆ. ಕರಾವಳಿಯ ಉಡುಪಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದಲ್ಲಿ 28ರವರೆಗೆ ಸಾಮಾನ್ಯ ಮಳೆ ಬೀಳುವ ಸಂಭವವಿದೆ. ನಂತರ ನ.29ರಂದು ತಾಪಮಾನ ಹೆಚ್ಚಾಗಲಿದ್ದು, ಒಣ ಹವೆ ಮುಂದುವರಿಯಲಿದ್ದು, ಜನರು ಮನೆಯಿಂದ ಹೊರಬರದಂತೆ ಸೂಚನೆ ನೀಡಲಾಗಿದೆ.

> ರಾಜ್ಯ ಮತ್ತು ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇನ್ನೆರಡು ದಿನ ಮಳೆಯಾಗುವ ಮುನ್ಸೂಚನೆಯಿದೆ. ಹೀಗಾಗಿ, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ.
> - ಬಿಎಸ್ ಯಡಿಯೂರಪ್ಪ
> ಮುಖ್ಯಮಂತ್ರಿ

## ಹವಾಮಾನ ಇಲಾಖೆ ಮುನ್ಸೂಚನೆ

**ಬೆಂಗಳೂರು:** ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ಬುಧವಾರ ರಾತ್ರಿ 2 ಗಂಟೆ ವೇಳೆಗೆ ತಮಿಳುನಾಡಿನ ಕರಾವಳಿ ಭಾಗಗಳಲ್ಲಿ ನಿವಾರ್ ಚಂಡಮಾರುತ ಅಪ್ಪಳಿಸಿದೆ. ಇದರ ಪರಿಣಾಮದಿಂದ ಕರ್ನಾಟಕದ ದಕ್ಷಿಣ ಒಳನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇದಕ್ಕಾಗಿ ಈಗಾಗಲೇ ರಾಜ್ಯ ಸರಕಾರ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದು, ಬೆಂಗಳೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾಗುವ ಸಾಧ್ಯತೆಯಿದೆ. ನಿವಾರ್ ಚಂಡಮಾರುತದ ಪರಿಣಾಮದಿಂದ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ ಗುರುವಾರ ಹಾಗೂ ಶುಕ್ರವಾರ ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ತುಮಕೂರು, ರಾಮನಗರ ಜಿಲ್ಲೆಗಳಲ್ಲಿ ಹವಾಮಾನ ಇಲಾಖೆ ಹಳದಿ ಅಲರ್ಟ್ ಘೋಷಿಸಿದೆ. ಬೆಂಗಳೂರಿನ ಮೆಜೆಸ್ಟಿಕ್, ಗಾಂಧಿನಗರ, ಮಲ್ಲೇಶ್ವರಂ, ಜಯನಗರ ಸೇರಿದಂತೆ ಹಲವೆಡೆ ಗುರುವಾರ ತುಂತುರು ಮಳೆಯಾಗಿದೆ. ಶುಕ್ರವಾರವೂ ಬೆಂಗಳೂರು ನಗರ, ಗ್ರಾಮಾಂತರ ಪ್ರದೇಶದಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆಯಿಂದ ಮಾಹಿತಿ ಲಭ್ಯವಾಗಿದೆ. ಬೆಂಗಳೂರು ಹೊರವಲಯದ ದಾಸರಹಳ್ಳಿ, ಮಲ್ಲಸಂದ್ರ, ಬಾಗಲಗುಂಟೆ ಸುತ್ತಮುತ್ತ ಜಿಟಿಜಿಟಿ ಮಳೆಯಾಗಲಿದೆ.

| Date | 27-11-2020 |
| --- | --- |
| Page No | 2 |

# ಹನಿ ಮಳೆ, ಚುಮು ಚಳಿಗೆ ಮುದುಡಿದ ಬೆಂಗಳೂರು...











**ಬೆಂಗಳೂರು:** ತುಸು ಹೆಚ್ಚಿದ್ದ ಚಳಿ, ಆಗಾಗ ಬರುತ್ತಿದ್ದ ಜಿಟಿಜಿಟಿ ಮಳೆ, ಇದಾಗಿಯೂ ಸಣ್ಣಗೆ ತಾಗುವ ತಂಗಾಳಿ... ಇದೆಲ್ಲದರಿಂದ ಗುರುವಾರ ಹೊದ್ದು ಮಲಗಿದಂತಿತ್ತು ಬೆಂಗಳೂರು. ಇವುಗಳೊಂದಿಗೆ ಸರ್ರನೇ ಐದು ಡಿಗ್ರಿ ಸೆಲ್ಸಿಯಸ್ ನಷ್ಟು ಇಳಿದಿದ್ದ ಉಷ್ಣಾಂಶ ಉದ್ಯಾನ ನಗರಿಯಲ್ಲಿ ಊಟಿಯ ವಾತಾವರಣ ಸೃಷ್ಟಿಸಿತು.

ನಿವಾರ್ ಚಂಡಮಾರುತ ಪ್ರಭಾವದಿಂದ ಸಾಮಾನ್ಯ ದಿನಗಳಂತೆ ಬೆಳಗ್ಗೆ ಎಳೆ ಬಿಸಿಲು ಬೀಳಲಿಲ್ಲ, ಸೂರ್ಯನ ಕಿರಣಗಳು ಮೂಡಲಿಲ್ಲ. ಜತೆಗೆ ಸಾಮಾನ್ಯ ದಿನಗಳಿಂತ ಚಳಿ ಹೆಚ್ಚಿದ್ದ ಹಿನ್ನೆಲೆ ರಾಜಧಾನಿ ಜನ ಬೆಳಗ್ಗೆ ಬೇಗ ಹಾಸಿಗೆಯಿಂದ ಮೇಲೇಳದೆ ಹೊದ್ದು ಮಲಗಿದ್ದರು. ಈ ಚಳಿಗೆ 10 ಗಂಟೆ ನಂತರ ಜಿಟಿಜಿಟಿ ಮಳೆ ಸಾಥ್ ನೀಡಿತು. ವಾಹನ ದಟ್ಟಣೆ, ಜನರ ಓಡಾಟ ಕಡಿಮೆಯಾಗಿ ಬಹುತೇಕ ಭಾಗಶಃ ಲಾಕ್‌ಡೌನ್ ವಾತಾವರಣ ಕಂಡು ಬಂದಿತು.

ಉದ್ಯಾನ ಮತ್ತು ರಸ್ತೆಗಳಲ್ಲಿ ವಾಯುವಿಹಾರಿಗಳ ಸಂಖ್ಯೆ ಕಡಿಮೆ ಇತ್ತು. ಕಚೇರಿಗೆ ತೆರಳುವವರು, ವಾಹನ ಸವಾರರು ಪರದಾಟ ನಡೆಸಿದರು. ಅದರಲ್ಲೂ ನಗರದ ಕೇಂದ್ರ ಭಾಗದ ವಿವಿಧ ರಸ್ತೆಗಳಲ್ಲಿ ಕಾಮಗಾರಿ ನಡೆಯುತ್ತಿದ್ದ ಹಿನ್ನೆಲೆ ಪಾದಚಾರಿಗಳು, ವಾಹನ ಸವಾರಿಗೆ ಸಮಸ್ಯೆ ಯಾಯಿತು. ಇನ್ನು ದಿನವಿಡೀ ಹಿಡಿದಿದ್ದ ಮಳೆ ಯಿಂದ ಹಾನಿಯಾಗಿಲ್ಲ ಎಂದು ಬಿಬಿಎಂಪಿ ತಿಳಿಸಿದೆ.

**ಇಂದು ಮುಂದುವರಿಯುವ ಸಾಧ್ಯತೆ:** ರಾಜ್ಯದಲ್ಲಿ ನಿವಾರ್ ಪ್ರಭಾವ ಎರಡರಿಂದ ಮೂರು ದಿನ ಇರಲಿದ್ದು, ಬೆಂಗಳೂರಿನಲ್ಲಿ ಚಳಿ, ಮೋಡಕವಿದ ವಾತಾವರಣ ಶುಕ್ರವಾರವೂ ಮುಂದುವರಿಯುವ ಸಾಧ್ಯತೆಗಳಿವೆ. ಆದರೆ, ಜಿಟಿಜಿಟಿ ಮಳೆಯು ಒಂದಿಷ್ಟು ಕಡಿಮೆಯಾಗಬಹುದು ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

**ವಾತಾವರಣ ವೈರಲ್:** ಗುರುವಾರ ಬೆಂಗಳೂರಿನ ವಾತಾವರಣದ ವಿಡಿಯೋ, ಫೋಟೊಗಳು ಜಾಲತಾಣದಲ್ಲಿ ವೈರಲ್ ಆಗಿದ್ದವು. ವಿಮಾನ, ಎತ್ತರದ ಕಟ್ಟಡ, ಡ್ರೋನ್ ಮೂಲಕ ಸೆರೆ ತೆಗೆದ ದೃಶ್ಯ, ಫೋಟೋಗಳನ್ನು ಜನರು ತಮ್ಮ ವ್ಯಾಟ್ಸಪ್ ಸ್ಟೇಟಸ್, ಫೇಸ್‌ಬುಕ್ ಪೇಜ್‌ಗಳಲ್ಲಿ 'ಬೆಂಗಳೂರು ಈಗ ಮಿನಿ ಊಟಿ' ಎಂದೆಲ್ಲಾ ಶೇರ್ ಮಾಡಿದ್ದರು.

ಉದಯವಾಣಿ
ಜನಮನದ ಜೀವನಾಡಿ

| Date | 27-11-2020 |
|---|---|
| Page No | 3 |



ಉದಯವಾಣಿ
ಜನಮನದ ಜೀವನಾಡಿ

| Date | 27-11-2020 |
|---|---|
| Page No | 4 |

# 30ರಿಂದ ಸಕಾಲ ಸಪ್ತಾಹ ಆಚರಣೆಗೆ ಸೂಚನೆ

**ಬೆಂಗಳೂರು:** ಪಾಲಿಕೆ ವ್ಯಾಪ್ತಿಯ ಎಲ್ಲಾ ಕಚೇರಿಗಳಲ್ಲಿ ನ.30ರಿಂದ ಡಿ.5ರವರೆಗೆ 'ಸಕಾಲ ಸಪ್ತಾಹ' ಆಚರಿಸುವಂತೆ ಪಾಲಿಕೆ ವಿಶೇಷ ಆಯುಕ್ತರು ಸೂಚಿಸಿದ್ದಾರೆ. ಈ ಬಗ್ಗೆ ಸುತ್ತೋಲೆ ಹೊರಡಿಸಿದ್ದು ಎಲ್ಲಾ ವಲಯಗಳ ಸಹ ಕಂದಾಯ ಅಧಿಕಾರಿಗಳ ಕಚೇರಿ, ಆರೋಗ್ಯ ವೈದ್ಯಾಧಿಕಾರಿಗಳ ಕಚೇರಿ, ಸಹಾಯಕ ಕಾರ್ಯಪಾಲಕ ಅಭಿಯಂತರ ಕಚೇರಿ, ಸಹಾಯ ನಿರ್ದೇಶಕರ (ನಗರ ಯೋಜನೆ) ಕಚೇರಿ, ಕಾರ್ಯಪಾಲಕ ಅಭಿಯಂತರ ಕಚೇರಿ ( ಯೋಜನೆ ಕೇಂದ್ರ-1) ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕೇಂದ್ರ ಕಚೇರಿಗಳಲ್ಲಿ ಸಕಾಲ ಸಪ್ತಾಹ ಆಚರಿಸುವಂತೆ ಸೂಚನೆ ನೀಡಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಕಚೇರಿಗಳಲ್ಲಿ ಸಕಾಲ ಸಪ್ತಾಹ ಆಚರಿಸಲಾಗುತ್ತಿದ್ದು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

| Date | 27-11-2020 |
|---|---|
| Page No | 4 |




ಸಂವಿಧಾನ ದಿನದ ಅಂಗವಾಗಿ ಗುರುವಾರ ಪಾಲಿಕೆ ಆವರಣದ ಅಂಬೇಡ್ಕರ್‌ರ ಪ್ರತಿಮೆಗೆ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್, ಹಿರಿಯ ಅಧಿಕಾರಿಗಳು ಮಾಲಾರ್ಪಣೆ ಮಾಡಿದರು. ವಿಶೇಷ ಆಯುಕ್ತರಾದ ಡಿ.ರಂದೀಪ್, ರಾಜೇಂದ್ರ ಚೋಳನ್, ಜೆ.ಮಂಜುನಾಥ್, ಮನೋಜ್ ಜೈನ್, ತುಳಸಿ ಮದ್ದಿನೇನಿ, ರವೀಂದ್ರ, ಜಂಟಿ ಆಯುಕ್ತರು(ಹಣಕಾಸು) ವೆಂಕಟೇಶ್, ಉಪ ಆಯುಕ್ತರು (ಆಡಳಿತ) ಲಿಂಗಮೂರ್ತಿ ಇದ್ದರು.

ಸಂಯುಕ್ತ ಕರ್ನಾಟಕ

| Date | 27-11-2020 |
| --- | --- |
| Page No | 2A |

# ಮಂದಗತಿಯಲ್ಲಿ ಕಾಮಗಾರಿ

## ವಾಹನ ಸವಾರರಿಗೆ ಪೀಕಲಾಟ । ರಸ್ತೆಗಳ ಮೇಲೆ ಮರಳು-ಜಲ್ಲಿ

**ಸಂ.ಕ.ಸಮಾಚಾರ ಬೆಂಗಳೂರು**

ರಾಜಧಾನಿಯ ಬೀದಿಗಳಲ್ಲಿ ವಾಹನ ಓಡಿಸುವುದೇ ಒಂದು ದೊಡ್ಡ ಸವಾಲು. ಏಕೆಂದರೆ ಕಾಮಗಾರಿ ಹೆಸರಿನಲ್ಲಿ ಡಾಂಬರು ರಸ್ತೆಗಳನ್ನು ಅಗೆದು ಹಾಕಲಾಗುತ್ತಿದೆ. ಮರಳು, ಜಲ್ಲಿ ಕಲ್ಲುಗಳನ್ನು ರಸ್ತೆಗಳಲ್ಲಿ ಹರಡಲಾಗುತ್ತಿದೆ, ಮರಳು–ಜಲ್ಲಿ ಕಲ್ಲುಗಳಿಂದ ಉಂಟಾಗುವ ಧೂಳು–ಅಲ್ಲಲ್ಲಿ ಬಿದ್ದಿರುವ ಗುಂಡಿಗಳ ನಡುವೆ ವಾಹನ ಸವಾರರು ಸಾಗಬೇಕಾಗಿದೆ.

ಇಂತಹ ಇಕ್ಕಟ್ಟಾದ ರಸ್ತೆಗಳಲ್ಲಿ ದ್ವಿಚಕ್ರ ವಾಹನ ಸವಾರರು ಕೊಂಚ ಮೈಮರೆತರೆ ಮುಗಿಯಿತು. ಇನ್ನು ಫುಟ್‌ಪಾತ್‌ಗಳ ಮೇಲೆ ಕಾಮಗಾರಿಗೆ ಬೇಕಾದ ಸಾಮಗ್ರಿಗಳು, ದೊಡ್ಡದೊಡ್ಡ ಪೈಪ್‌ಗಳನ್ನು ಹಾಕಿರುವುದರಿಂದ ಪಾದಚಾರಿಗಳು ಓಡಾಡಲು ಪರದಾಡಬೇಕಾಗಿದೆ.

ಜಲಮಂಡಳಿ, ಓಎಫ್‌ಸಿ ಕೇಬಲ್ ಅಳವಡಿಕೆ, ರಸ್ತೆ ದುರಸ್ತಿ, ಡಾಂಬರೀಕರಣ, ವೈಟ್‌ಟಾಪಿಂಗ್, ಟೆಂಡರ್‌ಶ್ಯೂರ್...ಹೀಗೆ ಒಬ್ಬರ ನಂತರ ಒಬ್ಬರು ನಿರಂತರವಾಗಿ ರಸ್ತೆಯನ್ನು ಅಗೆಯುವುದು, ಮುಚ್ಚುವುದು ಮತ್ತೆ ಅಗೆಯುವುದು ಇದೇ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುವುದರಿಂದ ಸುಸಜ್ಜಿತ ರಸ್ತೆ ನಗರ ವಾಸಿಗಳಿಗೆ ಕೇವಲ ಕನಸಾಗಿಯೇ ಉಳಿದಿದೆ.



ವಿಠಲ್ ಮಲ್ಯ ರಸ್ತೆಯಲ್ಲಿ ಜಲಮಂಡಳಿ ಕೈಗೊಂಡಿರುವ ಕಾಮಗಾರಿ.

ಕೋವಿಡ್ ಸಾಂಕ್ರಾಮಿಕದ ಕಾರಣ ವಿಧಿಸಲಾಗಿದ್ದ ಲಾಕ್‌ಡೌನ್ ಅವಧಿಯಲ್ಲಿ ರಸ್ತೆಯಲ್ಲಿ ಜನಸಂಚಾರ ಶೂನ್ಯವಾಗಿತ್ತು. ಈ ಸಮಯದ ಸದುಪಯೋಗ ಪಡೆದು ಬೆಂಗಳೂರಿನ ಎಲ್ಲ ರಸ್ತೆಗಳನ್ನು ದುರಸ್ತಿಗೊಳಿಸಬಹುದಾದ ಅಪೂರ್ವ ಅವಕಾಶ ಲಭ್ಯವಾಗಿತ್ತು. ಆದರೆ ಬಿಬಿಎಂಪಿಯಾಗಲೀ ಆಡಳಿತವಾಗಲೀ ಸಂಪೂರ್ಣವಾಗಿ ಕೊರೊನಾ ನಿಯಂತ್ರಣದಲ್ಲೇ ತೊಡಗಿಕೊಂಡಿರುವ ನೆಪವೊಡ್ಡಿ ಸಮಯ ವ್ಯರ್ಥಗೊಳಿಸಲಾಯಿತು.

ಈಗ ಅನ್‌ಲಾಕ್ ಪ್ರಕ್ರಿಯೆ ಆರಂಭವಾದ ಬಳಿಕ ಒಂದೊಂದೇ ಗುತ್ತಿಗೆ ಕಾಮಗಾರಿಗಳು ಆರಂಭವಾಗಿದೆ. ಕಳೆದ ವರ್ಷ ನಡೆಸಿದ್ದ ಕಾಮಗಾರಿ ಕೆಲಸಗಳು ಕಳೆದ ಮಳೆಗಾಲದ ಹೊಡೆತಕ್ಕೆ ಮತ್ತೆ ದುರಸ್ತಿಗೀಡಾಗಿರುವುದು ಕಾಮಗಾರಿಯ ಗುಣಮಟ್ಟಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಜಲ ಮಂಡಳಿ ಇದುವರೆಗೂ ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆಗಾಗಿ ಹೊಸದಾಗಿ ರಸ್ತೆ ಅಗೆಯಲಾಗಿದ್ದು ಬಹುತೇಕ ಕಡೆ ಪೈಪ್‌ಲೈನ್ ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ. 2021ರ ಮಾರ್ಚ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳುವುದಾಗಿ ಜಲಮಂಡಳಿ ತಿಳಿಸಿದ್ದರೂ, ದುರಸ್ತಿಗೀಡಾಗಿ ಮರು ಕಾಮಗಾರಿಗೊಳಗಾಗುತ್ತಿರುವ ಪೈಪ್‌ಲೈನ್ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಹೀಗಾಗಿ ಸಾರ್ವಜನಿಕರು ಸದಾ ಒಂದಿಲ್ಲೊಂದು ಪಡಿಪಾಟಲಿಗೀಡಾಗಬೇಕಿರುವುದು ತಪ್ಪಿಲ್ಲ. ಈ ಕಾಮಗಾರಿ ಮುಗಿಯುತ್ತಲೇ ಮತ್ತೆ ಓಎಫ್‌ಸಿ ಅಳವಡಿಕೆ, ರಸ್ತೆ ಗುಂಡಿ ತೆರವು ಇತ್ಯಾದಿ ಇತ್ಯಾದಿಗಳು ಪ್ರಾರಂಭಗೊಳ್ಳುವುದು ಶತಸಿದ್ಧ.

ಸಂಯುಕ್ತ ಕರ್ನಾಟಕ

| Date | 27-11-2020 |
| --- | --- |
| Page No | 2B |

ರಸ್ತೆಗಳಲ್ಲಿ ಸಂಚಾರ ದಟ್ಟಣೆ । ಮುರಿದುಬಿದ್ದ ಮರ-ಕೊಂಬೆಗಳು । ದ್ವಿಚಕ್ರವಾಹನ ಸವಾರರ ಪರದಾಟ

# ಜಿಟಿಜಿಟಿ ಮಳೆ–ಕೊರೆವ ಚಳಿ

**ಸಂ.ಕ. ಸಮಾಚಾರ ಬೆಂಗಳೂರು**

ತಮಿಳುನಾಡಿನ ಕರಾವಳಿಯಲ್ಲಿ ಸೃಷ್ಟಿಯಾಗಿರುವ ನಿವಾರ್ ಚಂಡಮಾರುತದ ಪರಿಣಾಮ ಬೆಂಗಳೂರಿನ ಮೇಲೂ ಬೀರಿದ್ದು ಬೆಳಗಿನ ಜಾವದಿಂದ ಒಂದೇ ಸಮನೆ ಜಿಟಿಜಿಟಿ ಮಳೆ ಸುರಿಯುತ್ತಲೇ ಇದೆ.

- **ಧರೆಗೆ ಬಿದ್ದ ಮರ–ಕೊಂಬೆಗಳ ತೆರವು**
- **ರಾಜಧಾನಿ ಸಂಪೂರ್ಣ ಕೂಲ್ ಕೂಲ್**
- **ಛತ್ರಿ ಹಿಡಿದು ರಸ್ತೆಗಳಲ್ಲಿ ಹೆಜ್ಜೆ**

ಬುಧವಾರ ರಾತ್ರಿ ತುಂತುರು ಹನಿಗಳು ಶುರುವಾದ ನಂತರ ಗುರುವಾರ ಬೆಳಗಿನ ಜಾವ 4 ಗಂಟೆಯಿಂದ ಒಂದೇ ಸಮನೆ ಜಿಟಿಜಿಟಿ ಮಳೆ ಸುರಿಯಲಾರಂಭಿಸಿತು. ಇದರಿಂದ ನಗರದ ಬಹುತೇಕ ರಸ್ತೆಗಳು ನೀರಿನಿಂದ ತುಂಬಿ ಕೆಲವು ಕಡೆ ವಾಹನ ಸಂಚಾರಕ್ಕೆ ಅಡ್ಡಿಯಾಗಿ ಹಲವಾರು ಕಡೆ ಸಂಚಾರ ದಟ್ಟಣೆ ಎದುರಾಯಿತು.

ಒಂದೇ ಸಮನೆ ಜಿಟಿಜಿಟಿ ಮಳೆ ಸುರಿಯತೊಡಗಿದ್ದರಿಂದ ಬೆಳಗ್ಗೆ ಉದ್ಯೋಗಕ್ಕೆ ತೆರಳುವವರು ಪರದಾಡಬೇಕಾಯಿತು. ದ್ವಿಚಕ್ರ ವಾಹನದಲ್ಲಿ ತೆರಳಬೇಕಾದವರು ಮಳೆಯಲ್ಲಿ ತೊಯ್ದುಕೊಂಡೇ ಕಚೇರಿಗೆ ತೆರಳಬೇಕಾಯಿತು. ಇನ್ನು ಸಂಜೆ ಕೂಡಾ ಮಳೆ ನಿಲ್ಲದೇ ಇದ್ದ ಪರಿಣಾಮವಾಗಿ ಮತ್ತೆ ತೊಯ್ದುಕೊಂಡೇ ಮನೆ ಸೇರಬೇಕಾಯಿತು.



ಜಿಟಿಜಿಟಿ ಮಳೆಯ ಪರಿಣಾಮ ಬೆಂಗಳೂರಿನ ಟೌನ್‌ಹಾಲ್ ಬಳಿ ಕಂಡುಬಂದ ದೃಶ್ಯ

ನಗರದ ಪೂರ್ವಭಾಗದಲ್ಲಿ ಹೆಚ್ಚು ಮಳೆಯಾಗಿರುವುದಾಗಿ ತಿಳಿಸಿರುವ ಹವಾಮಾನ ಇಲಾಖೆ ಇಡೀ ದಿನ ಮಳೆ ಸುರಿದರೂ 3 ರಿಂದ 4 ಸೆಂ.ಮೀ. ಮಾತ್ರ ಮಳೆಯಾಗಿದೆ. ಇನ್ನುಳಿದ ಭಾಗದಲ್ಲಿ 2 ರಿಂದ 3 ಸೆಂ.ಮೀ.ನಷ್ಟು ಮಾತ್ರ ಮಳೆಯಾಗಿದೆ ಎಂದಿದೆ.

ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಚಂದಾಪುರ, ಕೋರಮಂಗಲ, ಮಡಿವಾಳ, ವೈಟ್‌ಫೀಲ್ಡ್, ಕೆ.ಆರ್. ಪುರ, ಹೆಬ್ಬಾಳ, ಯಲಹಂಕ, ಹೊಸಕೋಟೆ ಭಾಗದಲ್ಲಿ ಹೆಚ್ಚು ಮಳೆಯಾಗಿದ್ದರೆ, ಹಲಸೂರು, ಇಂದಿರಾನಗರ, ಶಾಂತಿನಗರ, ಜಯನಗರ, ಬನಶಂಕರಿ, ಮಲ್ಲೇಶ್ವರ, ರಾಜಾಜಿನಗರ, ಮಾಗಡಿ ರಸ್ತೆ, ಯಶವಂತಪುರ, ಮೈಸೂರು ರಸ್ತೆ, ತುಮಕೂರು ರಸ್ತೆ ಭಾಗಗಳಲ್ಲಿ ಇಡೀ ದಿನ ಜಿಟಿಜಿಟಿ ಮಳೆ ಸುರಿದಿದ್ದರೂ ಮಳೆ ಪ್ರಮಾಣ ಕಡಿಮೆ ಎಂದು ತಿಳಿಸಿದೆ.

ಬೆಳಗ್ಗೆಯಿಂದ ತಡರಾತ್ರಿವರೆಗೂ ಒಂದೇ ಸಮನೆ ಮಳೆ ಸುರಿದಿದ್ದು ಮಾತ್ರವಲ್ಲದೆ, ಆಗಾಗ ಗಾಳಿ ಬೀಸುತ್ತಿದ್ದ ಪರಿಣಾಮವಾಗಿ ನಗರದ ಕೆಲವು ಭಾಗಗಳಲ್ಲಿ ರೆಂಬೆ ಕೊಂಬೆಗಳು ಮುರಿದುಬಿದ್ದಿದ್ದವು. ಇದರಿಂದ ಕೆಲವು ಕಾಲ ಸಂಚಾರ ದಟ್ಟಣೆಯುಂಟಾಗಿತ್ತು. ಬಿಬಿಎಂಪಿ ಸಿಬ್ಬಂದಿ ಆಗಮಿಸಿ ಮರದ ಕೊಂಬೆಗಳನ್ನು ತೆರವು ಮಾಡಿದರು. ಇನ್ನು ಕೆಲವು ಕಡೆ ಸಂಚಾರಿ ಪೊಲೀಸರೇ ರೆಂಬೆ ಕೊಂಬೆಗಳನ್ನು ಪಕ್ಕಕ್ಕೆ ಸರಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದು ಕಂಡುಬಂತು.

ಸಂಯುಕ್ತ ಕರ್ನಾಟಕ

| Date | 27-11-2020 |
| --- | --- |
| Page No | 2B |

# ವೈದ್ಯರ ಉನ್ನತ ಶಿಕ್ಷಣಕ್ಕೆ ತೆರಿಗೆ ಹಣ ಸಲ್ಲ

**ಸಂ.ಕ.ಸಮಾಚಾರ ಬೆಂಗಳೂರು**

ಸಾರ್ವಜನಿಕರ ತೆರಿಗೆ ಹಣದಿಂದ ಇಬ್ಬರು ಬಿಬಿಎಂಪಿ ವೈದ್ಯರು ಎಂಪಿಎಚ್ ಕೋರ್ಸ್ ಮಾಡಲು ತೆರಳುತ್ತಿರುವ ಅಂಶ ಬೆಳಕಿಗೆ ಬಂದಿದ್ದು ಇದಕ್ಕೆ ಅವಕಾಶ ನೀಡಬಾರದು ಎಂದು ಬಿಜೆಪಿ ದಕ್ಷಿಣ ವಿಭಾಗದ ಅಧ್ಯಕ್ಷ ಎನ್.ಆರ್.ರಮೇಶ್ ಅವರು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಹಾಗೂ ಆಯುಕ್ತ ಮಂಜುನಾಥ್ ಪ್ರಸಾದ್ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

ಬಿಬಿಎಂಪಿಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದ ಡಾ.ರಾಮು ಮತ್ತು ಸೈಯ್ಯದ್ ಎಂಬುವರು 2016–2017ನೆ ಸಾಲಿನಲ್ಲಿ ತಜ್ಞ ವೈದ್ಯರ ಕೊರತೆ ನೀಗಿಸುವ ಉದ್ದೇಶದಿಂದ ಪಾಲಿಕೆಯ ಕೋಟ್ಯಂತರ ಹಣವನ್ನು ವೆಚ್ಚ ಮಾಡಿ ತಜ್ಞವೈದ್ಯರ (ಎಂಡಿ) ಕೋರ್ಸ್ ಮಾಡಲು ಕಳುಹಿಸಿಕೊಡಲಾಗಿತ್ತು. ಮೂರು ವರ್ಷಗಳ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿ ವಾಪಸಾದ ಈ ಇಬ್ಬರು ವೈದ್ಯರು ತಮ್ಮ ವಿದ್ಯಾರ್ಜನೆ ವೇಳೆಯಲ್ಲೂ ಎಲ್ಲ ರೀತಿಯ ವೇತನ ಮತ್ತು ಭತ್ಯೆಗಳನ್ನು ಪಡೆದುಕೊಂಡಿರುತ್ತಾರೆ. ಕಳೆದ ನಾಲ್ಕು ತಿಂಗಳ ಹಿಂದೆಯಷ್ಟೇ ಸ್ನಾತಕೋತ್ತರ ಪದವಿ ಪೂರೈಸಿ ಬಂದಿರುವ ರಾಮು ಮತ್ತು ಸೈಯ್ಯದ್ ಅವರು ಕಾನೂನಿನ ಪ್ರಕಾರ ಪಾಲಿಕೆಯ ರೆಫರಲ್ ಆಸ್ಪತ್ರೆಗಳಲ್ಲಿ ಫಿಜಿಷಿಯನ್‌ಗಳಾಗಿ ಕರ್ತವ್ಯ ನಿರ್ವಹಿಸಬೇಕಿತ್ತು. ಆದರೆ ಈ ಇಬ್ಬರು ವೈದ್ಯರು ತಮ್ಮ ರಾಜಕೀಯ ಪ್ರಭಾವ ಬಳಸಿ ಕೆಸಿಎಸ್‌ಆರ್ ನಿಯಮಗಳನ್ನು ಗಾಳಿಗೆ ತೂರಿ ಮತ್ತೊಮ್ಮೆ ಸಾರ್ವಜನಿಕರ ತೆರಿಗೆ ಹಣದ ಮೂಲಕ ಎಂಪಿಎಚ್ ಕೋರ್ಸ್ ಮಾಡಲು ತೆರಳುತ್ತಿದ್ದಾರೆ.

ಈ ಇಬ್ಬರು ವೈದ್ಯರಿಗೆ ಪಾಲಿಕೆ ಆಡಳಿತ ವಿಭಾಗದ ವಿಶೇಷ ಆಯುಕ್ತರು, ಹಣಕಾಸು ವಿಭಾಗದ ಅಧಿಕಾರಿಗಳು ಹಾಗೂ ಆರೋಗ್ಯಾಧಿಕಾರಿಗಳು ಬೆಂಬಲವಾಗಿ ನಿಂತಿದ್ದಾರೆ. ಹೀಗಾಗಿ ಈ ಕೂಡಲೇ ಈ ಇಬ್ಬರು ವೈದ್ಯರ ಎಂಪಿಎಚ್ ಅಧ್ಯಯನಕ್ಕೆ ತೆರಳುವುದನ್ನು ರದ್ದುಗೊಳಿಸಿ ಅವಶ್ಯಕತೆ ಇರುವ ರೆಫರಲ್ ಮತ್ತು ಡಯಾಲಿಸಿಸ್ ಕೇಂದ್ರಗಳಲ್ಲಿ ಫಿಜಿಶಿಯನ್‌ಗಳಾಗಿ ನಿಯೋಜಿಸಬೇಕು ಎಂದು ಎನ್.ಆರ್.ರಮೇಶ್ ಮನವಿ ಮಾಡಿಕೊಂಡಿದ್ದಾರೆ.

ಸಂಯುಕ್ತ ಕರ್ನಾಟಕ

| Date | 27-11-2020 |
|---|---|
| Page No | 2B |


# 844 ಮಂದಿಗೆ ಕೊರೊನಾ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಕಳೆದ 24 ಗಂಟೆಗಳಲ್ಲಿ 844 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು ಏಳು ಮಂದಿ ಬಲಿಯಾಗಿದ್ದಾರೆ.

ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ 3,67,077ಕ್ಕೆ ಏರಿಕೆಯಾಗಿದೆ. ಈವರೆಗೆ ಸಾವಿನ ಸಂಖ್ಯೆ 4,108ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ 1,505 ಮಂದಿಗೆ ಸೋಂಕು ತಗುಲಿದ್ದು 1,067 ಜನ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಗುರುವಾರ ಒಟ್ಟು 12 ಮಂದಿ ಮೃತಪಟ್ಟಿದ್ದಾರೆ.

ಒಟ್ಟು ಸೋಂಕಿತರ ಸಂಖ್ಯೆ 8,79,560ಕ್ಕೆ ಏರಿಕೆಯಾಗಿದೆ. ಪ್ರಸ್ತುತ 25,316 ಸಕ್ರಿಯ ಪ್ರಕರಣಗಳಿವೆ. ಇಲ್ಲಿಯವರೆಗೆ ಒಟ್ಟು 11,726 ಮಂದಿ ಸೋಂಕಿಗೆ ಮೃತಪಟ್ಟಿದ್ದಾರೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆ ತಿಳಿಸಿದೆ.

ಸಂಯುಕ್ತ ಕರ್ನಾಟಕ

| Date | 27-11-2020 |
|---|---|
| Page No | 3 |

# ಸಫಾಯಿ ಕರ್ಮಚಾರಿಗಳ ಮರು ಸಮೀಕ್ಷೆಗೆ ಸೂಚನೆ

**ಸಂ.ಕ.ಸಮಾಚಾರ ಬೆಂಗಳೂರು**

ಬಿಬಿಎಂಪಿ ವ್ಯಾಪ್ತಿಯಲ್ಲಿ ಇರುವ ಸಫಾಯಿ ಕರ್ಮಚಾರಿಗಳ ಮರುಸಮೀಕ್ಷೆ ನಡೆಸುವಂತೆ ಬಿಬಿಎಂಪಿ ಆಯುಕ್ತರು ಸೂಚನೆ ನೀಡಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ಮ್ಯಾನ್‌ಹೋಲ್‌ಗಳಿಗೆ ಇಳಿದು ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಂಡಿರುವ ಸಫಾಯಿ ಕರ್ಮಚಾರಿಗಳ ಕುರಿತಂತೆ ಪಾಲಿಕೆ ಮಟ್ಟದ ವಿಷಕ್ಷಣಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ನಗರದ ವ್ಯಾಪ್ತಿಯಲ್ಲಿ ಸಫಾಯಿ ಕರ್ಮಚಾರಿಗಳು ಒಳಚರಂಡಿ, ಮಲಮೂತ್ರ ಗುಂಡಿಗಳಲ್ಲಿ ಇಳಿದು ಕೈಗಳ ಮೂಲಕ ಸ್ವಚ್ಛ ಮಾಡುವಂತಿಲ್ಲ. ಆದರೂ ಕೆಲವು ಭಾಗಗಳಲ್ಲಿ ಇಂತಹ ಕಾರ್ಯವಾಗುತ್ತಿರುವುದರಿಂದ ಈ ಬಗ್ಗೆ ವಿಶೇಷ ಸಮೀಕ್ಷೆ ಮಾಡಿಸಬೇಕೆಂದು ವಲಯ ಜಂಟಿ ಆಯುಕ್ತರಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಗೆ 110 ಹಳ್ಳಿಗಳು ಸೇರ್ಪಡೆಯಾಗಿವೆ. ಈ ಭಾಗದಲ್ಲಿ ಇನ್ನು ಒಳಚರಂಡಿ ಕಾಮಗಾರಿ ಪೂರ್ಣವಾಗಿಲ್ಲ. ಇಂತಹ ಕಡೆಗಳಲ್ಲಿ ಈಗಲೂ ಪಿಟ್‌ಗಳಿವೆ. ಇವುಗಳ ಸ್ವಚ್ಛತೆಗೆ ಸಫಾಯಿ ಕರ್ಮಚಾರಿಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಪಿಟ್‌ಗಳಿಗೆ ಇಳಿದು ಸ್ವಚ್ಛ ಮಾಡುವುದು ಈಗ ಕಾನೂನುಬಾಹಿರ. ಈ ಹಿನ್ನೆಲೆಯಲ್ಲಿ ಇಂತಹ ಕಾರ್ಯ ಮಾಡುತ್ತಿರುವವರನ್ನು ಪತ್ತೆ ಮಾಡಿ ಅವರ ಜೀವನೋಪಾಯಕ್ಕೆ ಪರ್ಯಾಯವಾಗಿ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಸಹಾಯಕ ಆಯುಕ್ತರು ಸೋಮಪ್ಪ ಕಡಕೋಳ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಮೊದಲ ಸಮೀಕ್ಷೆ ನಡೆಸಿ 201 ಮಂದಿಯನ್ನು ಗುರುತಿಸಲಾಗಿತ್ತು. ಸಮೀಕ್ಷೆಯಲ್ಲಿ ಗುರುತಿಸಿದವರಿಗೆ ಕೇಂದ್ರ ಸರ್ಕಾರ 40,000 ರೂ. ಸಹಾಯಧನ ನೀಡಲಿದೆ. ಈ ಪೈಕಿ 71 ಮಂದಿಗೆ 40,000 ಸಹಾಯಧನ ನೀಡಲಾಗಿದೆ. ಇನ್ನುಳಿದವರಿಗೆ ಸಹಾಯಧನ ನೀಡಲು ಅಗತ್ಯ ದಾಖಲೆಗಳನ್ನು ಪಡೆದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದೀಗ ಹೊಸದಾಗಿ ಪಾಲಿಕೆ 8 ವಲಯಗಳ ಪೈಕಿ ಯಲಹಂಕ, ಬೊಮ್ಮನಹಳ್ಳಿ ಹಾಗೂ ದಾಸರಹಳ್ಳಿ ವಲಯ ಹೊರತುಪಡಿಸಿ ನಡೆಸಿದ ಸಮೀಕ್ಷೆಯಲ್ಲಿ 1,139 ಮಂದಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಗುರುತಿಸಲಾಗಿದೆ ಎಂದು ಸಭೆಯಲ್ಲಿ ಮಾಹಿತಿ ನೀಡಿದರು.

ವಿಶೇಷ ಆಯುಕ್ತ ರವೀಂದ್ರ, ಜಂಟಿ ಆಯುಕ್ತರಾದ ವೆಂಕಟಾಚಲಪತಿ, ನಾಗರಾಜ್, ನರಸಿಂಹಮೂರ್ತಿ, ಪಲ್ಲವಿ ಮತ್ತಿತರರಿದ್ದರು.

> “ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಹೆಚ್ಚಿದ್ದು ಒಳಚರಂಡಿ/ಪಿಟ್‌ಗಳನ್ನು ಸ್ವಚ್ಛಗೊಳಿಸಲು ಜಟ್ಟಿಂಗ್ ಹಾಗೂ ಇನ್ನಿತರೆ ಯಂತ್ರಗಳಿವೆ. ಆ ಯಂತ್ರಗಳ ಮೂಲಕವೇ ಸ್ವಚ್ಛ ಮಾಡಬೇಕು. ಯಾರೂ ಕೂಡಾ ಮಾನವರ ಮೂಲಕ ಮಾಡುವಂತಿಲ್ಲ.
>
> ■ **ಮಂಜುನಾಥ ಪ್ರಸಾದ್** | ಪಾಲಿಕೆ ಆಯುಕ್ತ

ಹೊಸ ದಿಗಂತ

| Date | 27-11-2020 |
| --- | --- |
| Page No | 1 |

# ರಾಜ್ಯದಲ್ಲಿ ಇನ್ನೂ 2 ದಿನ ಮಳೆ

**ಬೆಂಗಳೂರು:** ನಿವಾರ್ ಚಂಡಮಾರುತದ ಪರಿಣಾಮವಾಗಿ ರಾಜ್ಯದ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಗುರುವಾರ ಮಳೆಯಾಗಿದೆ. ಹವಾಮಾನ ಇಲಾಖೆ ಪ್ರಕಾರ ಇನ್ನೂ ಎರಡು ದಿನ ಮಳೆಯಾಗಲಿದೆ. ಬೆಂಗಳೂರು ನಗರ ಹಾಗೂ ಗ್ರಾಮೀಣ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಮಂಡ್ಯ ಜಿಲ್ಲೆಗಳಲ್ಲಿ ಜಿಟಿಜಿಟಿ ಮಳೆಯಾಗಿದೆ. ನಗರದಲ್ಲಿ ಬೆಳಗಿನಿಂದಲೂ ಮಳೆಯಾದ ಪರಿಣಾಮ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ರಸ್ತೆಗಿಳಿಯಲಿಲ್ಲ, ಅಂಗಡಿ-ಮುಂಗಟ್ಟು ಮುಚ್ಚಿದ್ದರಿಂದ ವ್ಯಾಪಾರ-ವಹಿವಾಟು ಮಂದಗತಿಯಲ್ಲಿತ್ತು. ↘ಳ



**ನಿವಾರ್‌ಗೆ ನಾಲ್ವರ ಬಲಿ** • ಪುಟ ೭

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 27-11-2020 |
| --- | --- |
| Page No | 8 |

## ದುರ್ಬಲಗೊಂಡ ನಿವಾರ್ ಚಂಡಮಾರುತ

# ರಾಜ್ಯದ ಹಲವೆಡೆ ಜಿಟಿಜಿಟಿ ಮಳೆ



ಬೆಂಗಳೂರು, ನ.26: ಮೂರು ದಿನದಿಂದ ರಾಜ್ಯದ ದಕ್ಷಿಣ ಒಳನಾಡಿನ ಏಳು ಜಿಲ್ಲೆಗಳ ಜನರಲ್ಲಿ ಆತಂಕ ಮೂಡಿಸಿದ್ದ ನಿವಾರ್ ಚಂಡಮಾರುತ ಗುರುವಾರದ ವೇಳೆಗೆ ದುರ್ಬಲವಾಗಿದ್ದರಿಂದ ನಿರೀಕ್ಷಿತ ಮಟ್ಟದಲ್ಲಿ ಮಳೆ ಆಗಲಿಲ್ಲ. ರಾಜ್ಯದ ಕೆಲವು ಕಡೆಗಳಲ್ಲಿ ಮಾತ್ರ ಜಿಟಿಜಿಟಿ ಮಳೆಯಾಗಿದೆ.

ಬುಧವಾರ ಬೆಳಗ್ಗೆ ವೇಳೆಗೆ ಪುದುಚೇರಿ ದಾಟಿದ ನಂತರ ನಿವಾರ್ ಚಂಡಮಾರುತ ದುರ್ಬಲಗೊಂಡ ಪರಿಣಾಮ ಗುರುವಾರ ಸಂಜೆವರೆಗೆ ದಕ್ಷಿಣ ಒಳನಾಡಿನ ಕೋಲಾರ, ಚಿಕ್ಕಬಳ್ಳಾಪುರದಲ್ಲಿ ತುಸು ಅಧಿಕ ಮಳೆ ಸುರಿದಿದೆ. ಇದರ ಹೊರತು ಎಲ್ಲಿಯೂ ನಿರೀಕ್ಷಿತ ಧಾರಾಕಾರ ಮಳೆ ಬಂದಿಲ್ಲ. ಗುರುವಾರ ರಾತ್ರಿಯಿಂದ ಶುಕ್ರವಾರ ಬೆಳಗ್ಗೆವರೆಗೆ ಅಧಿಕ ಮಳೆಯಾಗಬಹುದು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಂಗಾಳಕೊಲ್ಲಿ ನೈಋತ್ಯ ಭಾಗದಲ್ಲಿ ಸೃಷ್ಟಿಯಾಗಿದ್ದ ನಿವಾರ್ ಚಂಡಮಾರುತ ವಾಯುವ್ಯ ಮಾರ್ಗವಾಗಿ ಅತೀ ವೇಗವಾಗಿ ಬೀಸಿ ಅರ್ಭಟಿಸಿತ್ತು. 130 ಕಿ.ಮೀ.ಗಿಂತಲೂ ಹೆಚ್ಚು ವೇಗದಲ್ಲಿ ಬೀಸಿದ್ದ ಗಾಳಿ ತಾನು ಹಾದು ಹೋದ ತಮಿಳುನಾಡು, ಚೆನ್ನೈ, ಕಾರೈಕಲ್ ಮತ್ತು ಪುದುಚೇರಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾರಿ ಮಳೆ ಸುರಿಸಿ ಅವಾಂತರ ಉಂಟು ಮಾಡಿತು. ಅದೇ ರೀತಿ ರಾಜ್ಯದ ದಕ್ಷಿಣ ಒಳನಾಡಿನ ಏಳು ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಬರಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಗುರುವಾರದ ಹೊತ್ತಿಗೆ ನಿವಾರ್ ಚಂಡಮಾರುತದ ಅರ್ಭಟ ಕಡಿಮೆ ಆಗಿದ್ದರಿಂದ ಇಡೀ ದಿನ ಉದ್ದೇಶಿತ ಜಿಲ್ಲೆಗಳಲ್ಲಿ ಅಷ್ಟಾಗಿ ಮಳೆ ಕಂಡು ಬರಲಿಲ್ಲ. ನಿವಾರ್ ಚಂಡಮಾರುತದ ಪ್ರಭಾವ ನ.27ರ ಶುಕ್ರವಾರದ ವೇಳೆಗೆ ಮತ್ತಷ್ಟು ಕಡಿಮೆಯಾಗುವ ಮುನ್ಸೂಚನೆ ಇದ್ದರೂ ಕೂಡ ರಾಜ್ಯದ ದಕ್ಷಿಣ ಒಳನಾಡಿನ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಮಂಡ್ಯ ಬೆಂಗಳೂರು ನಗರ ಮತ್ತು ಗ್ರಾಮಾಂತರದಲ್ಲಿ ಸಾಧಾರಣ ಮಳೆ ನಿರೀಕ್ಷೆಯಿದೆ. ಹೀಗಾಗಿ ಈ ಎಲ್ಲ ಜಿಲ್ಲೆಗಳಿಗೆ ನ.27ಕ್ಕೆ ಒಂದು ದಿನ 'ಯೆಲ್ಲೋ ಅಲರ್ಟ್' ಎಚ್ಚರಿಕೆ ನೀಡಲಾಗಿದೆ. ಎಲ್ಲ ಕಡೆ ಚಳಿಯ ಮತ್ತು ಮೋಡ ಕವಿದ ವಾತಾವರಣ ಮುಂದುವರಿಯುವ ಸಾಧ್ಯತೆಯಿದ್ದು, ಕರಾವಳಿ ಹಾಗೂ ಉತ್ತರ ಒಳನಾಡಿನ ಭಾಗದ ಕೆಲವು ಕಡೆಗಳಲ್ಲಿ ಸಾಮಾನ್ಯ ಮಳೆ ಬೀಳುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

### ಜನಜೀವನ ಅಸ್ತವ್ಯಸ್ತ

ನಿವಾರ್ ಚಂಡಮಾರುತ ಪರಿಣಾಮ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಗುರುವಾರ ದಿನವಿಡೀ ಜಿಟಿಜಿಟಿ ಮಳೆಯಾಗಿದ್ದರಿಂದ ಜನಜೀವನ ಅಸ್ತವ್ಯಸ್ತವಾಯಿತು. ಬೆಳಗ್ಗೆಯಿಂದಲೇ ಆರಂಭವಾದ ಮಳೆ ರಾತ್ರಿವರೆಗೂ ಮುಂದುವರಿಯಿತು. ಸ್ವಲ್ಪ ಹೊತ್ತು ಜೋರಾಗಿ ಬಂದರೆ, ಬಿಡುವಿನ ಸಂದರ್ಭದಲ್ಲಿ ಸೋನೆ ಮಳೆಯ ರೀತಿಯಲ್ಲಿ ಹನಿಯುತ್ತಲೇ ಇತ್ತು. ಇದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರು ಪರದಾಡುವಂತಾಯಿತು.

ಸಂಜೆವಾಣಿ
1982

| Date | 26-11-2020 |
| --- | --- |
| Page No | 3 |



ಸಂವಿಧಾನ ದಿನವಾದ ಇಂದು ನಗರದ ಬಿಬಿಎಂಪಿ ಕೇಂದ್ರ ಕಛೇರಿಯಲ್ಲಿಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಮತ್ತು ಅಯುಕ್ತ ಮಂಜುನಾಥ್ ಪ್ರಸಾದ್ ಅವರು ಪ್ರಮಾಣ ವಚನ ಸ್ವೀಕರಿಸಿದರು.

# ಸಂವಿಧಾನ ರಕ್ಷಣೆಗೆ ಪ್ರತಿಜ್ಞೆ

ಬೆಂಗಳೂರು, ನ.26–ಸಂವಿಧಾನ ದಿನದ ಅಂಗವಾಗಿ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಅವರು ಸಂವಿಧಾನ ಪೀಠಿಕೆ ಓದಿ ಪ್ರತಿಜ್ಞಾವಿಧಿ ಬೋಧಿಸಿದರು.

ನಗರದಲ್ಲಿಂದು ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿದರು.ತದನಂತರ ಸಂವಿಧಾನ ಪ್ರಸ್ತಾವನೆಯ ಪ್ರತಿಜ್ಞೆಯನ್ನು ಸ್ವೀಕರಿಸಿದರು.

ಬಳಿಕ ಮಾತನಾಡಿದ ಅವರು, ಭಾರತ ವಿಭಿನ್ನತೆಯಲ್ಲಿ ಏಕತೆ ಸಾರುವ ದೇಶ. ರಾಷ್ಟ್ರದ ಸಮಗ್ರತೆ, ಸಾಮಾಜಿಕ ನ್ಯಾಯ ಹಾಗೂ ಎಲ್ಲ ವರ್ಗಗಳಿಗೆ ಅನುಗುಣವಾಗಿ ಜನರ ಆಶೋತ್ತರಗಳನ್ನು ಕಾಪಾಡುವ ಸಂವಿಧಾನವನ್ನು ರಚಿಸುವಲ್ಲಿ ಡಾ.ಬಿ.ಆರ್.ಅಂಬೇಡ್ಕರ ಅವರ ಕೊಡುಗೆ ಅಪಾರ' ಎಂದು ತಿಳಿಸಿದರು.

ದೇಶದ ಸಮಸ್ತ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆ ಎಲ್ಲರಿಗೂ ದೊರೆಯುವಂತೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್, ವಿಶೇಷ ಆಯುಕ್ತರುಗಳಾದ ಡಿ.ರಂದೀಪ್, ರಾಜೇಂದ್ರ ಚೋಳನ್, ಜೆ.ಮಂಜುನಾಥ್, ಮನೋಜ್ ಜೈನ್, ತುಳಸಿ ಮದ್ದಿನೇನಿ, ರವೀಂದ್ರ, ಜಂಟಿ ಆಯುಕ್ತರು(ಹಣಕಾಸು) ವೆಂಕಟೇಶ್, ಉಪ ಆಯುಕ್ತರು(ಆಡಳಿತ) ಲಿಂಗಮೂರ್ತಿ, ವಲಯ ಜಂಟಿ ಆಯುಕ್ತರು ಹಾಗೂ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಜೆವಾಣಿ
1982

| Date | 26-11-2020 |
| --- | --- |
| Page No | 3 |

# ವಿದೇಶಕ್ಕೆ ವೈದ್ಯರು ಕ್ರಮಕ್ಕೆ ರಮೇಶ್ ಆಗ್ರಹ

ಬೆಂಗಳೂರು,ನ.26– ಇಬ್ಬರು ವೈದ್ಯರನ್ನು ವಿದೇಶಕ್ಕೆ ಕಳುಹಿಸಿ ಕೊಟ್ಯಂತರ ರೂ.ನಷ್ಟಕ್ಕೆ ಕಾರಣರಾಗಿರುವ ಬಿಬಿಎಂಪಿ ವಿಶೇಷ ಹಣಕಾಸು ಆಯುಕ್ತರು ಮತ್ತು ಆರೋಗ್ಯಾಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವಂತೆ ಬಿಜೆಪಿ ದಕ್ಷಿಣ ವಿಭಾಗ ಅಧ್ಯಕ್ಷ ಎನ್.ಆರ್ ರಮೇಶ್ ಒತ್ತಾಯಿಸಿದ್ದಾರೆ.

ಬಿಬಿಎಂಪಿ ಆಸ್ಪತ್ರೆಯ ಕ್ಲಿನಿಕಲ್ ವಿಭಾಗದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದ ಡಾ. ರಾಮು ಹಾಗೂ ಡಾ. ಸೈಯದ್ ಅವರನ್ನು ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಕಳುಹಿಸಲಾಗಿತ್ತು. ಈ ಇಬ್ಬರು ವೈದ್ಯರು ವೈದ್ಯಕೀಯ ಪದವಿ ಪೂರ್ಣಗೊಳಿಸಿ ಕಳೆದ 4 ತಿಂಗಳ ಹಿಂದೆಯಷ್ಟೆ ಸ್ವದೇಶಕ್ಕೆ ಮರಳಿದ್ದರು. ಆದರೆ, ಮತ್ತೆ ಇವರಿಬ್ಬರನ್ನು ವಿದೇಶಕ್ಕೆ ಕಳುಹಿಸಲಾಗಿದೆ. ಇದರಿಂದ ಪಾಲಿಕೆಗೆ ಕೊಟ್ಯಂತರ ರೂ. ನಷ್ಟವಾಗಿದೆ. ತಕ್ಷಣ ಅವರಿಬ್ಬರನ್ನು ವಾಪಸ್ ಕರೆಸಿಕೊಳ್ಳಬೇಕೆಂದು ರಮೇಶ್ ಒತ್ತಾಯಿಸಿದ್ದಾರೆ.

ಪಾಲಿಕೆಯ ನಿಯಮಗಳನ್ನು ಗಾಳಿಗೆ ತೂರಿ ಈ



ಇಬ್ಬರು ವೈದ್ಯರನ್ನು ವಿದೇಶಕ್ಕೆ ಕಳುಹಿಸುವ ಮೂಲಕ ನಿಯಮ ಉಲ್ಲಂಘಿಸಿರುವ ಪಾಲಿಕೆಯ ವಿಶೇಷ ಹಣಕಾಸು ಆಯುಕ್ತರು ಮತ್ತು ಆರೋಗ್ಯಾಧಿಕಾರಿಗಳ ಮೇಲೆ ಶಿಸ್ತುಕ್ರಮ ಕೈಗೊಳ್ಳಬೇಕೆಂದು ಆಯುಕ್ತರು ಹಾಗೂ ಆಡಳಿತಾಧಿಕಾರಿಗಳಿಗೆ ಎನ್.ಆರ್ ರಮೇಶ್ ಮನವಿ ನೀಡಿ ಒತ್ತಾಯಿಸಿದ್ದಾರೆ.

| Date | 26-11-2020 |
|---|---|
| Page No | 8 |



**ಮಳೆಯಾದರೇನು.......ಚಳಿಯಾದರೇನು** ಗೇಣು ಹೊಟ್ಟೆ ತುಂಬಿಸಿಕೊಳ್ಳಲು ದುಡಿಮೆ ಅನಿವಾರ್ಯ. ಕೂಲಿ ಕಾರ್ಮಿಕ ತನ್ನ ಬಾಳ ಬಂಡಿಯಲ್ಲಿ ಕೆಲಸಕ್ಕೆ ಹೊರಟ್ಟಿದ್ದರೆ, ಯುವತಿ ಮಳೆಯಲ್ಲು ಕೆಲಸಕ್ಕೆ ತೆರಳುತ್ತಿರುವುದು ನಗರದಲ್ಲಿ ಕಂಡು ಬಂದ ದೃಶ್ಯ.

ಸಂಜೆವಾಣಿ 1982

| Date | 26-11-2020 |
|---|---|
| Page No | 8 |


# ನಗರದಲ್ಲಿ ತುಂತುರು ಮಳೆ

ಬೆಂಗಳೂರು,ನ.26– ನಿವಾರ್ ಚಂಡ ಮಾರುತದಿಂದ ರಾಜ್ಯದ ಕೆಲವು ಭಾಗಗಳಲ್ಲಿ ತುಂತುರು ಮಳೆಯಾಗಿದ್ದು, ಜನ ಜೀವನ ಅಸ್ತವ್ಯಸ್ತಗೊಂಡಿದೆ.ತಮಿಳುನಾಡು, ಆಂಧ್ರಪ್ರದೇಶ, ಪುದುಚೆರಿಯ ಕರಾವಳಿ ಪ್ರದೇಶಗಳಲ್ಲಿ ವರುಣ ಆರ್ಭಟಿಸುತ್ತಿದ್ದು, ಈ ರಾಜ್ಯಗಳ ಗಡಿಗೆ ಹೊಂದಿಕೊಂಡಂತಿರುವ ಕೋಲಾರ, ಚಾಮರಾಜನಗರ ಹಾಗೂ ಬೆಂಗಳೂರು ನಗರ ಸುತ್ತಮುತ್ತ ಮುಂಜಾನೆಯಿಂದಲೇ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿ ತುಂತುರು ಮಳೆ ಸುರಿಯುತ್ತಿರುವುದರಿಂದ ಕೆಲಸ ಕಾರ್ಯಗಳಿಗೆ ಹೋಗುವವರು ಪಜೀತಿ ಪಡುವಂತಾಯಿತು. ಅದರಲ್ಲೂ ಬೆಂಗಳೂರಿನಲ್ಲಿ ನಿರಂತರವಾಗಿ ಸುರಿಯುತ್ತಿದ್ದ ಮಳೆಯಿಂದ ವಾಹನ ಸವಾರರು ಪರದಾಡುವಂತಾಯಿತು. ಅಷ್ಟೇ ಅಲ್ಲದೆ ಕೆಲಸ ಕಾರ್ಯಗಳಿಗೆ ಹೋಗುವವರು ಕೊಡೆಯ ಆಶ್ರಯ ಪಡೆದು ಮಳೆಯಲ್ಲೇ ಹೆಜ್ಜೆ ಹಾಕುವಂತಾಯಿತು.

ನಗರದಲ್ಲಿ ಇಡೀ ದಿನ ಮೋಡ ಮುಸುಕಿದ ವಾತಾವರಣದ ಮಧ್ಯೆ ಚಳಿಗಾಳಿ ಬೀಸಿ ಮಳೆ ಸುರಿಯುತ್ತಲೇ ಇತ್ತು. ಮಳೆಯನ್ನು ಶಪಿಸುತ್ತಲೇ ಜನ ಕೆಲಸಕಾರ್ಯಗಳಲ್ಲಿ ಮಗ್ನವಾಗಿದ್ದು ಕಂಡು ಬಂತು. ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ರಾಮನಗರ, ಚಾಮರಾಜನಗರ ಜಿಲ್ಲೆಗಳಲ್ಲಿ ಗಾಳಿ ಸಹಿತ ಸಂಜೆ ವೇಳೆಗೆ ಭಾರೀ ಮಳೆಯಾಗುವ ಸಾಧ್ಯತೆಗಳಿರುವ ಹಿನ್ನೆಲೆಯಲ್ಲಿ ಜನರು ಮನೆಯಿಂದ ಹೊರಬರದಂತೆ, ಸೂಚನೆ ನೀಡಲಾಗಿದೆ.

ಈ ಸಂಜೆ

| Date | 26-11-2020 |
| --- | --- |
| Page No | 2 |

# ಇನ್ನು ಮೂರು ದಿನ ಮಳೆ ಸಂಭವ

**ಬೆಂಗಳೂರು,ನ.26-** ತೀವ್ರ ಆತಂಕ ಉಂಟು ಮಾಡಿದ್ದ ನಿವಾರ್ ಚಂಡಮಾರುತ ದುರ್ಬಲಗೊಳ್ಳುತ್ತಿದ್ದು, ರಾಜ್ಯದಲ್ಲಿ ಇನ್ನೂ ಮೂರು ದಿನಗಳ ಕಾಲ ಮಳೆ ಮುಂದುವರೆಯುವ ಮುನ್ಸೂಚನೆಗಳಿವೆ.

ಚಂಡಮಾರುತ ಕ್ಷೀಣಿಸುತ್ತಿರುವುದರಿಂದ ತೀವ್ರ ಸ್ವರೂಪ ಪಡೆಯಲಿದೆ ಎಂಬ ಆತಂಕ ನಿವಾರಣೆಯಾಗಿದ್ದು, ಮಳೆ ಪ್ರಮಾಣವೂ ಕಡಿಮೆಯಾಗುತ್ತಿದೆ.

ಬಂಗಾಳಕೊಲ್ಲಿಯಲ್ಲಿ ಉಂಟಾಗಿದ್ದ ಚಂಡಮಾರುತದ ಪರಿಣಾಮ ತಮಿಳುನಾಡಿನಲ್ಲಿ ಭಾರೀ ಮಳೆಯಾಗಿದೆ. ನಿನ್ನೆ ಚಂಡಮಾರುತ ಭೂ ಸ್ಪರ್ಶವಾದ ನಂತರ ಅದರ ತೀವ್ರತೆ ಕಡಿಮೆಯಾಗುತ್ತಿದೆ. ನಿನ್ನೆ ಸಂಜೆಯಿಂದಲೇ ರಾಜ್ಯದ ಪೂರ್ವ ಭಾಗದ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ತುಂತುರು ಮಳೆ ಆರಂಭವಾಗಿದ್ದು, ಇಂದೂ ಕೂಡ ಮುಂದುವರೆದಿದೆ.

ತಮಿಳುನಾಡು ಕರಾವಳಿಯಿಂದ ಆಂಧ್ರಪ್ರದೇಶದ ಕರಾವಳಿಯತ್ತ ಚಂಡಮಾರುತ ಸಾಗುತ್ತಿದ್ದು, ಮಳೆ ಪ್ರಮಾಣದಲ್ಲೂ ಇಳಿಮುಖವಾಗಲಿದೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

ರಾಜ್ಯದ ದಕ್ಷಿಣ ಒಳನಾಡು ಹಾಗೂ ಪೂರ್ವಭಾಗದ ಜಿಲ್ಲೆಗಳಲ್ಲಿ ನ.28ರವರೆಗೂ ಮಳೆ ಮುಂದುವರೆಯಲಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿವೃತ್ತ ನಿರ್ದೇಶಕ ಎ.ಎಸ್.ಪ್ರಕಾಶ್ ತಿಳಿಸಿದರು.

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಮಳೆಯಾಗಿದೆ. ಇಂದು ಬೆಳಗ್ಗೆಯಿಂದಲೇ ಜಿಟಿ ಜಿಟಿ ಮಳೆ ಆರಂಭವಾಗಿದ್ದು, ಮುಂದುವರೆಯುವ ಮುನ್ಸೂಚನೆಗಳಿವೆ. ಪೂರ್ವ ಭಾಗದ ಜಿಲ್ಲೆಗಳಾದ ಬಳ್ಳಾರಿ, ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು ಒಳಗೊಂಡಂತೆ ದಕ್ಷಿಣ ಒಳನಾಡಿನಲ್ಲಿ ಮಧ್ಯಮ ಪ್ರಮಾಣದಲ್ಲಿ ಮಳೆ ಮುಂದುವರೆಯಲಿದೆ.

| Date | 26-11-2020 |
| --- | --- |
| Page No | 2 |



ಸಂವಿಧಾನ ದಿನಾಚರಣೆ ಅಂಗವಾಗಿ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಹಾಗೂ ಆಯುಕ್ತ ಮಂಜುನಾಥ ಪ್ರಸಾದ್ ಅವರು ಪಾಲಿಕೆ ಕೇಂದ್ರ ಕಚೇರಿ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿದರು.

![ಈ ಸಂಜೆ]

| Date | 26-11-2020 |
|---|---|
| Page No | 6 |

### ತ್ಯಾಜ್ಯ ನಿರ್ವಹಣೆಗೆ ಪ್ರತ್ಯೇಕ ಮಂಡಳಿ ಸ್ಥಾಪನೆಗೆ

# ಆಮ್ ಆದ್ಮಿ ವಿರೋಧ

**ಬೆಂಗಳೂರು, ನ.26-** ಬೆಂಗಳೂರಿನ ಬೃಹತ್ ಸಮಸ್ಯೆಯಾಗಿ, ಮಾಫಿಯಾವಾಗಿ ಬದಲಾಗಿರುವ ತ್ಯಾಜ್ಯ ನಿರ್ವಹಣೆಗೆ ಪ್ರತ್ಯೇಕ ಸ್ವಾಯತ್ತ ಮಂಡಳಿ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸುವುದಾಗಿ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಹೇಳಿದ್ದು, ಈ ನಡೆಯನ್ನು ವಿರೋಧಿಸುವುದಾಗಿ ಆಮ್ ಆದ್ಮಿ ಪಕ್ಷದ ರಾಜ್ಯ ಸಹ ಸಂಚಾಲಕಿ ಶಾಂತಲಾ ದಾಮ್ಲೆ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಬದಲಾಗುವುದಕ್ಕಿಂತ ಮೊದಲು ಬೆಂಗಳೂರಿನ ಕಸ ನಿರ್ವಹಣೆ ಆರೋಗ್ಯ ಅಧಿಕಾರಿಗಳ ಅಡಿಯಲ್ಲಿ ಬರುತ್ತಿತ್ತು ಆನಂತರ ಇದನ್ನು ಎಂಜಿನಿಯರಿಂಗ್ ವಿಭಾಗಕ್ಕೆ ವರ್ಗಾಯಿಸಲಾಯಿತು, ಇದಾದ ನಂತರ ಕಸದ ಮಾಫಿಯಾ ಕೈಗೆ ಸಿಲುಕಿ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟು ಇಡೀ ಬೆಂಗಳೂರು ಕಸದ ಕೊಂಪೆಯಾಗಿ ಮಾರ್ಪಟ್ಟಿದೆ ಎಂದು ಆರೋಪಿಸಿದರು.

ಇಡೀ ಸರ್ಕಾರವನ್ನೇ ನಿಯಂತ್ರಣ ಮಾಡುವಷ್ಟು ಬೆಳೆದಿರುವ ಕಸದ ಮಾಫಿಯಾಗಳ ಚಿತಾವಣೆಯಿಂದ ಈ ಕೆಲಸಕ್ಕೆ ಬಿಬಿಎಂಪಿ ಕೈ ಹಾಕಿದೆ. 150 ಕೋಟಿ ವೆಚ್ಚದ ಕಸ ನಿರ್ವಹಣೆ ಬಜೆಟ್ ಈಗಾಗಲೇ 1200 ಕೋಟಿಗೆ ಮುಟ್ಟಿದೆ. ಪ್ರತ್ಯೇಕ ಮಂಡಳಿ ರಚಿಸಿ ಮತ್ತಷ್ಟು ಜನರ ಹಣವನ್ನು ತಿನ್ನುವ ಹುನ್ನಾರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂಜೆ

| Date | 26-11-2020 |
| --- | --- |
| Page No | 6 |

# ತೆರಿಗೆ ಹಣದಲ್ಲಿ ವೈದ್ಯರ ಉನ್ನತಾಭ್ಯಾಸಕ್ಕೆ ಅವಕಾಶ ಬೇಡ

**ಬೆಂಗಳೂರು, ನ.26-** ಸಾರ್ವಜನಿಕರ ತೆರಿಗೆ ಹಣದಿಂದ ಎಂಪಿಎಚ್ ಕೋರ್ಸ್ ಮಾಡಲು ತೆರಳುತ್ತಿರುವ ಇಬ್ಬರು ಬಿಬಿಎಂಪಿ ವೈದ್ಯರಿಗೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು ಹಾಗೂ ಕಾನೂನು ಬಾಹಿರವಾಗಿ ಇಂತಹ ಕ್ರಮಕ್ಕೆ ಮುಂದಾದ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ದಕ್ಷಿಣ ವಿಭಾಗದ ಅಧ್ಯಕ್ಷ ಎನ್.ಆರ್.ರಮೇಶ್ ಅವರು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಹಾಗೂ ಆಯುಕ್ತ ಮಂಜುನಾಥ್ ಪ್ರಸಾದ್ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

ಬಿಬಿಎಂಪಿಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದ ಡಾ.ರಾಮು ಮತ್ತು ಸಯ್ಯದ್ ಎಂಬುವರು 2016-2017ನೆ ಸಾಲಿನಲ್ಲಿ ತಜ್ಞ ವೈದ್ಯರ ಕೊರತೆ ನೀಗಿಸುವ ಉದ್ದೇಶದಿಂದ ಪಾಲಿಕೆ ಕೋಟ್ಯಂತರ ಹಣದಲ್ಲಿ ಎಂಡಿ ಕೋರ್ಸ್ ಮಾಡಲು ಕಳುಹಿಸಿಕೊಡಲಾಗಿತ್ತು.

ಮೂರು ವರ್ಷಗಳ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿ ವಾಪಸಾದ ಈ ಇಬ್ಬರು ವೈದ್ಯರು ತಮ್ಮ ವಿದ್ಯಾರ್ಜನೆ ವೇಳೆಯಲ್ಲೂ ಎಲ್ಲಾ ರೀತಿಯ ವೇತನ ಮತ್ತು ಭತ್ಯೆಗಳನ್ನು ಪಡೆದುಕೊಂಡಿರುತ್ತಾರೆ.

ಕಳೆದ ನಾಲ್ಕು ತಿಂಗಳ ಹಿಂದೆಯಷ್ಟೇ ಸ್ನಾತಕೋತ್ತರ ಪದವಿ ಪೂರೈಸಿ ಬಂದಿರುವ ರಾಮು ಮತ್ತು ಸಯ್ಯದ್ ಅವರು ಕಾನೂನಿನ ಪ್ರಕಾರ ಪಾಲಿಕೆಯ ರೆಫರಲ್ ಆಸ್ಪತ್ರೆಗಳಲ್ಲಿ ಫಿಜಿಷಿಯನ್‌ಗಳಾಗಿ ಕರ್ತವ್ಯ ನಿರ್ವಹಿಸಬೇಕಿತ್ತು. ಆದರೆ ಈ ಇಬ್ಬರು ವೈದ್ಯರು ತಮ್ಮ ರಾಜಕೀಯ ಪ್ರಭಾವ ಬಳಸಿ ಕೆಸಿಎಸ್‌ಆರ್ ನಿಯಮಗಳನ್ನು ಗಾಳಿಗೆ ತೂರಿ ಮತ್ತೊಮ್ಮೆ ಸಾರ್ವಜನಿಕರ ತೆರಿಗೆ ಹಣದ ಮೂಲಕ ಎಂಪಿಎಚ್ ಕೋರ್ಸ್ ಮಾಡಲು ತೆರಳುತ್ತಿದ್ದಾರೆ.

ಈ ಇಬ್ಬರು ವೈದ್ಯರಿಗೆ ಪಾಲಿಕೆ ಆಡಳಿತ ವಿಭಾಗದ ವಿಶೇಷ ಆಯುಕ್ತರು, ಹಣಕಾಸು ವಿಭಾಗದ ಅಧಿಕಾರಿಗಳು ಹಾಗೂ ಆರೋಗ್ಯಾಧಿಕಾರಿಗಳು ಬೆಂಬಲವಾಗಿ ನಿಂತಿದ್ದಾರೆ. ಹೀಗಾಗಿ ಈ ಕೂಡಲೇ ಈ ಇಬ್ಬರು ವೈದ್ಯರ ಎಂಪಿಎಚ್ ಅಧ್ಯಯನಕ್ಕೆ ತೆರಳುವುದನ್ನು ರದ್ದುಗೊಳಿಸಿ ಅವಶ್ಯಕತೆ ಇರುವ ರೆಫರಲ್ ಮತ್ತು ಡಯಾಲಿಸಿಸ್ ಕೇಂದ್ರಗಳಲ್ಲಿ ಫಿಜಿಶಿಯನ್‌ಗಳಾಗಿ ನಿಯೋಜಿಸಬೇಕು ಎಂದು ಎನ್.ಆರ್.ರಮೇಶ್ ಮನವಿ ಮಾಡಿಕೊಂಡಿದ್ದಾರೆ.

ಸಾರ್ವಜನಿಕ ತೆರಿಗೆ ಹಣದೊಂದಿಗೆ ಚೆಲ್ಲಾಟವಾಡುತ್ತಿರುವ ವೈದ್ಯರು ಹಾಗೂ ಅವರಿಗೆ ಬೆಂಬಲವಾಗಿ ನಿಂತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿಕೊಂಡಿದ್ದಾರೆ.

